In the year 1953-54 about Rs. 5 lakhs has been written off on this account. That is shown in accounts for 1954-55. The revised estimate shows a provision of 30,000 rupees. Now once again in 1955-56 budget estimates, there is a provision of 1,60,000 rupees—page 112 under 3. Agricultural Demonstration and Propaganda including Public Exhibition and Fairs. I want to know, how much of the loan issued is irrecoverable. Let us know exactly how much we have to write off. Has this writing off become necessary or is it because that the people are unable to pay? Does it represent that the loan was issued to persons who owned no land or this loss sustained at the time of transport? Something we must know definitely. In the assets side we know nearly Rs. 3 crores is due from the departmental advance. So let us know where we stand, as to how much of this amount is irrecoverable. That is one thing.

The other thing I wanted to impress is about Botanical Department costing us Rs. 49 lakhs. I think we could definitely merge it with the Agricultural Department and economise certain portions of the expenditure.

The third thing I wanted to submit is: the supply of seed is very important. The arrangements that we are having today in taluk headquarters are absolutely inadequate. It bears no proportion to the total acreage under cultivation in that area. In fact, whatever is provided in each taluk is absolutely inadequate. They cannot inspect the areas to which they supply seed or manure. The issue of manure is in accordance with the classification of soil. It is simply issued to any person who asks for it. There must be some method. There are certain soils wherein the salt content is increased by the use of manures. The Department has neither the staff nor a programme to inspect the site and issue the manure. There must be some methodical approach to the problem. There is no meaning in saying that we have issued Rs. 50 lakhs worth of manure. There must be some system. You must divide each area into viable units and advise the ryot on the nature of the crops to be raised, the quantity of manure that he can put into it, the type of manure, etc. Let us face facts. What is the use of simply saying we are spending Rs. 60 lakhs on Agriculture? It does very little good. Further, you have sent several officers of the Agricultural Department for foreign training. None of them has been given any opportunity to continue the studies he had in those countries. It cost us a lot of money. They had returned to their original duties as Assistant Director or Personal Assistant to the Director. They have specialised in some subjects and the Government have no means of making use of their knowledge. They are sent to countries the practice of which countries we can never adopt and the specialised subject we cannot continue here. We must put an end to wasteful expenditure. We must face facts.

(*Sri D. R. Kari Gowda rose.*)

MR. DEPUTY SPEAKER.—Sri Kari Gowda will be the last speaker. The Minister requires at least 10 minutes to reply.

SRI H. M. CHANNABASAPPA (Periyapatna).—I submit that some more time may be allotted.

MR. DEPUTY SPEAKER.—Is it the idea of the Hon'ble Members to alter the time fixed already?

SRI H. M. CHANNABASAPPA.—Yes.

MR. DEPUTY SPEAKER.—Shall we go on till 11-30?

MEMBERS.—Yes.

SRI H. M. CHANNABASAPPA.—If the House is agreeable to allot the maximum time possible for this important Demand, there are so many members who have got to voice their views about the agricultural propaganda taking place. . .

MR. DEPUTY SPEAKER.—I don't deny the importance of the subject. But there must be some time limit fixed.

SRI H. M. CHANNABASAPPA.—We will discuss till about 12 o'clock.

MR. DEPUTY SPEAKER.—What about Co-operation?

Sri H. M. CHANNABASAPPA.—It is comparatively of smaller importance. We will cut down some time.

Mr. DEPUTY SPEAKER.—Do you agree Sri Imam ?

Sri J. MOHAMED IMAM.—I have no objection.

Mr. DEPUTY SPEAKER.—All right.

*ಶ್ರೀ ಡಿ. ಆರ್. ಕರೀಗೌಡ (ಹಾಸನ).—ಸ್ವಾಮಿ, ಈ ದಿವಸ ನಮ್ಮ ಮೈಸೂರು ಸಂಸ್ಥಾನದಲ್ಲಿರತಕ್ಕ ಹಾಸನ ಜಿಲ್ಲೆಯಲ್ಲಿ ಈಗಾಗಲೇ ಹತ್ತು ಸಾವಿರ ಮಣದ ವರೆಗೂ ಆಲೂಗಡ್ಡೆಯನ್ನು ಬೆಳೆಯುವುದಕ್ಕೆ ಪ್ರಾರಂಭವಾಗಿದೆ. ಪ್ರತಿ ಸಾಲಿನಲ್ಲಿಯೂ ಸುಮಾರು 50 ಸಾವಿರ ರೂಪಾಯಿಗಳ ಬೆಲೆ ಬಾಳತಕ್ಕಷ್ಟು ಆಲೂಗಡ್ಡೆಯನ್ನು ಹೊರಗಡೆಗೆ ರವಾನೆ ಮಾಡುತ್ತಿದ್ದೇವೆ. ಈ ದಿವಸ ಈ ಜಿಲ್ಲೆಯಲ್ಲಿ ಅನೇಕ ಜನರು ಈ ವ್ಯವಸಾಯದಿಂದ ಜೀವನೋಪಾಯ ಮಾಡುತ್ತಿದ್ದಾರೆ. ಈಗ ನಾವು ಅಲ್ಲಿಗೆ ಬೇಕಾದಂಥ ಆಲೂಗಡ್ಡೆ ಬೀಜವನ್ನು ಬಿತ್ತನೆಗಾಗಿ ಚಿಕ್ಕಬಳ್ಳಾಪುರದ ಪ್ರಾಂತದಿಂದ ತರುತ್ತಿದ್ದೇವೆ. ನಮ್ಮ ಹಾಸನ ಜಿಲ್ಲೆಯಲ್ಲಿರತಕ್ಕಂಥ ಜಮೀನುಗಳು ಈ ಆಲೂಗಡ್ಡೆ ಬೆಳೆಗೆ ಬಹಳ ಪ್ರಾಶಸ್ತ್ಯವುಳ್ಳವುಗಳಾಗಿವೆ. ಹವಾ ಚೆನ್ನಾಗಿದೆ. ಆ ಪ್ರದೇಶದಲ್ಲಿ ಈ ಬೆಳೆ ಬಹಳ ಹುಲುಸಾಗಿ ಬರುತ್ತಿದೆ. ಆದರೆ ಈ ವರ್ಷ ಅದೇನು ಕಾರಣವೋ ಒಂದು ರೋಗ ತಗುಲಿ ಆ ಬೆಳೆಯೆಲ್ಲಾ ಹೊರಟು ಹೋಗಿದೆ. ಹೀಗಾಗಿ ರೈತರಿಗೆ ತುಂಬ ಲುಕ್ಸಾನಾಗಿದೆ, ರೈತರಿಗೆ ಅವರು ಈ ವ್ಯವಸಾಯಕ್ಕೆ ಮಾಡಿರತಕ್ಕ ಖರ್ಚೂ ಸಹ ಈ ದಿವಸ ಹುಟ್ಟುತ್ತಿಲ್ಲ. ಇಂಥ ತೊಂದರೆಯುಂಟಾಗಿದೆ. ಈ ಕಾರಣದಿಂದ ತಾವು ಈ ರೋಗದ ಹಾವಳಿಯನ್ನು ತಡೆಗಟ್ಟಿ ರೈತರ ತೊಂದರೆಯನ್ನು ನಿವಾರಣೆ ಮಾಡಿ, ತನ್ಮೂಲಕ ಈ ಬೆಳೆಯನ್ನು ಅಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಯಲು ಅನುಕೂಲಪಡಿಸತಕ್ಕ ಬಗ್ಗೆ ಒಂದು ಆಲೂಗಡ್ಡೆಯ ಸಂಶೋಧನಾಲಯವನ್ನು ತೆರೆಯಬೇಕೆಂದು ಸರ್ಕಾರದವರಿಗೆ ಕಳೆದ ಎರಡು ವರ್ಷಗಳಿಂದಲೂ ಒತ್ತಾಯಪಡಿಸುತ್ತಲೇ ಬಂದಿದ್ದೇವೆ. ಆದರೆ ಅವರ ಗಮನಕ್ಕೇ ಈ ವಿಚಾರ ಇನ್ನೂ ಹೋದಂತೆ ಕಾಣುವುದಿಲ್ಲ. ಈ ಹಿಂದೆ ಹಾಸನಕ್ಕೆ ಒಬ್ಬ ಎಕ್ಸ್‌ಪರ್ಟನ್ನೂ ಸಹ ಕರೆಸಿ ಅಲ್ಲಿ ಸ್ಥಳ ಪರಿಶೀಲನೆ ಇತ್ಯಾದಿಗಳನ್ನೆಲ್ಲಾ ಮಾಡಿ ಅಲ್ಲಿ ಒಂದು ಈ ಬೆಳೆಯ ಸಂಶೋಧನಾಲಯವನ್ನು ತೆರೆಯುವುದಕ್ಕೆ ಅವಕಾಶವಿದೆಯೆಂದು ಹೇಳಿದರು. ಆದರೆ ಈ ದಿವಸ ಆ ಸಂಶೋಧನಾಲಯವನ್ನು ಬೇರೆ ಇನ್ನೆಲ್ಲಿಯೋ ಒಂದು ಕಡೆ ತೆರೆಯಲಾಗುತ್ತದೆಯೆಂದು ವರ್ತಮಾನ ಕೇಳುತ್ತಿದ್ದೇವೆ. ಅಲ್ಲಿಗೆ ಈಗ ಈ ಬಿತ್ತನೆ ಆಲೂಗಡ್ಡೆಯನ್ನು ತರಲು ಬಹಳ ದುಡ್ಡು ಖರ್ಚಾಗುತ್ತಿದೆ. ಒಂದೊಂದಾವರ್ತಿ ಈ ಬೀಜದ ಆಲೂಗಡ್ಡೆಯ ಬೆಲೆ ಮಣ ಒಂದಕ್ಕೆ 30—40 ರೂಪಾಯಿಗಳ ಮೇಲೆ ಹೋಗುತ್ತದೆ. ಆದರೆ ಆ ಬೀಜ ಆ ಭೂಮಿಗೆ ಆಗದೆಯೋ ಏನೋ ಬೆಳೆಯೆಲ್ಲಾ ಹಾಳಾಗಿ ಹೋಗುತ್ತಿದೆ. ರೈತರಿಗೆ ಇಲ್ಲಿಯ ತನಕ ಬರುತ್ತಿದ್ದಂಥ ಫಾಯಿದೆ ಎಲ್ಲಾ ಹೋಗಿ ಈ ದಿವಸ ನೂರಾರು ಸಂಸಾರಗಳು ಹಾಳಾಗುತ್ತಿವೆ. ಇಲ್ಲಿಯ ತನಕ ಈ ಬೆಳೆಯನ್ನು ತೆಗೆಯಲು ರೈತರಿಗೆ ಬಹಳ ಉತ್ಸಾಹವಿತ್ತು. ಆದರೆ ಈ ದಿವಸ ಆ ಉತ್ಸಾಹವೆಲ್ಲಾ ಹೋಗಿಬಿಟ್ಟಿದೆ. ಆದುದರಿಂದ ಈ ದಿವಸ ಸರ್ಕಾರದವರು ಆ ಭೂಮಿಗೆ ಇಂಥ ಬೀಜ ಆಗುತ್ತದೆ, ಇಂಥ ಕಾಲದಲ್ಲೇ ಬೆಳೆಯಬೇಕು, ಇಂಥ ಗೊಬ್ಬರ ಹಾಕಬೇಕು ಎಂಬ ತಿಳಿವಳಿಕೆಯನ್ನು ಕೊಟ್ಟು ರೈತರಿಗೆಲ್ಲ ಒಂದು ಉತ್ಸಾಹ ಬರುವಂತೆ ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರದವರು ತಕ್ಕ ಗಮನಕೊಡಬೇಕೆಂದು ಒತ್ತಾಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಹಾಸನ ಜಿಲ್ಲೆಯಲ್ಲಿ ನಾನಾ ಜಾತಿಯ ಹಣ್ಣು ಹಂಪಲು ವಿಶೇಷವಾಗಿ ಬೆಳೆಯಲ್ಪಡುತ್ತಿವೆ. ಪ್ರಖ್ಯಾತಿ ಹೊಂದಿದ ಕಿತ್ತಲೇಹಣ್ಣು, ಬಾಳೆಹಣ್ಣು, ಅನಾನಸ್ ಇತ್ಯಾದಿಗಳು ಅಲ್ಲಿ ಹೇರಳವಾಗಿ ಬೆಳೆಯುತ್ತಿವೆ. ಆದರೆ ಇತ್ತೀಚೆಗೆ ಕಿತ್ತಳೇಹಣ್ಣಿಗೆ ಯಾವುದೋ ರೋಗ ಬಂದು ಆ ವ್ಯವಸಾಯದಲ್ಲಿ ತೊಡಗಿದ್ದ ರೈತರಿಗೂ ಬಹಳ ಲುಕ್ಸಾನಾಗಿ ಅವರೂ ಕೂಡ ಬಹಳ ಹೀನಸ್ಥಿತಿಗೆ ಬಂದಿದ್ದಾರೆ. ಅವರಿಗೆ ಇದನ್ನು ನಿವಾರಣೆ ಮಾಡಲು ಏನು ಚಿಕಿತ್ಸೆ ಮಾಡಬೇಕೆಂಬುದೇ ತಿಳಿಯದಾಗಿದೆ. ಹೀಗಾಗಿ ಆ ಜಿಲ್ಲೆಯ ರೈತರಿಗೆ ನಾನಾ ರೀತಿಯಲ್ಲಿ ಕಷ್ಟನಷ್ಟಗಳುಂಟಾಗುತ್ತಿರುವುದರಿಂದ ಮಾನ್ಯ ಮಂತ್ರಿಗಳು ಈ ವಿಚಾರಗಳಿಗೆ ಕೂಡಲೇ ಗಮನಕೊಟ್ಟು ಈ ರೋಗ ನಿವಾರಣೆಗೆ ಏನೇನು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೂಡಲೆ ಏರ್ಪಡಿಸಬೇಕೆಂದು ಒತ್ತಾಯಪಡಿಸುತ್ತೇನೆ; ಮತ್ತು ಅಲ್ಲಿಗೆ ಒಂದು ಫ್ರೂಟ್‌ಕ್ಯಾನಿಂಗ್ ಇಂಡಸ್ಟ್ರಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ—ಈಗ ಅಲ್ಲಿಗೆ ರೈತರ ಸಹಾಯಕ್ಕಾಗಿ ಒಂದು ಸೊಸೈಟಿಯನ್ನು ಕೊಟ್ಟಿದ್ದಾರೆ. ಆದರೂ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇನ್ನು ಇಂಡಿಯಾ ಸರ್ಕಾರದವರು ನಮ್ಮ ಸಂಸ್ಥಾನದ ರೈತರ ಅಭಿವೃದ್ಧಿಗಾಗಿ ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಎರಡು ಸ್ಥಾನಗಳನ್ನು ಮೀಸಲಾಗಿಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದವರು ಇದನ್ನೂ ಸದುಪಯೋಗಪಡಿಸಿಕೊಂಡಿಲ್ಲ. ಈಗ ಒಬ್ಬ ವಿದ್ಯಾರ್ಥಿಯನ್ನು ಮಾತ್ರ ಕಳುಹಿಸಿದ್ದಾರೆ. ಇದರಿಂದ ನಮ್ಮ ರೈತಾಪಿ ವರ್ಗಕ್ಕೇನೂ ಸಹಾಯ ದೊರೆತಂತಾಗಲಿಲ್ಲ. ನಮ್ಮಲ್ಲಿಯೇ ಒಂದು ರಿಸರ್ಚ್ ಇನ್‌ಸ್ಟಿಟ್ಯೂಟನ್ನು ಸರ್ಕಾರದವರು ತೀವ್ರವಾಗಿ ಏರ್ಪಾಡುಮಾಡಬೇಕೆಂದು ಒತ್ತಿ ಹೇಳುತ್ತೇನೆ. ಹೀಗೆ ಇಲ್ಲಿ ಒಂದು ಹಣ್ಣಿನ ಕೇಂದ್ರವನ್ನು ಏರ್ಪಡಿಸಿ ಈ ಹಣ್ಣುಗಳು ಪೂರ್ತಿಯಾಗಿ ಪರದೇಶಕ್ಕೆ ಇಲ್ಲಿಂದ ರಫ್ತಾಗುವಂತೆ ಒಂದು ಅನುಕೂಲವಾದ ಏರ್ಪಾಡನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಸ್ವಾಮಿ, ರೈತರು ಬೆಳೆಯುವ ಬೆಳೆಗಳಿಗೆ ಒಂದು ಸರಿಯಾದ ಧಾರಣೆಯನ್ನು ನಿಗದಿ ಮಾಡಬೇಕೆಂಬ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ತಿಳಿಸಿರುತ್ತೇವೆಂದು ನಮ್ಮ ಮುಖ್ಯ ಮಂತ್ರಿಗಳು ತಮ್ಮ ಬಡ್ಜೆಟ್ಟಿನ ಭಾಷಣ ಕಾಲದಲ್ಲಿ ತಿಳಿಸಿದ್ದಾರೆ. ಅದರಂತೆ ತಾವೀಗ ಧಾನ್ಯದ ಬೆಲೆಗಳನ್ನು ನಿಗದಿ ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರದವರು ಆದಷ್ಟು ಜಾಗ್ರತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಏತಕ್ಕೆಂದರೆ ಈಗಾಗಲೆ ನಮ್ಮಲ್ಲಿ ಭತ್ತಕ್ಕೆ ಧಾರಣೆ ಬಿದ್ದುಹೋಗಿದೆ. ಪಲ್ಲಾ ಒಂದಕ್ಕೆ 10 ರೂಪಾಯಿಗಳವರೆಗೂ ಧಾರಣೆ ಇಳಿದು ಬಂದಿದೆ. ಆದುದರಿಂದ ಸರ್ಕಾರದವರು ಈ ದಿವಸ ಆ ರೈತನ ಕಷ್ಟಗಳೇನಿರುತ್ತವೆ ಅನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಈ ಹಿಂದೆ ಸರ್ಕಾರದವರು ಹಕೋಟಿಗಳನ್ನು ತಂದು ಹಾಕಿ ರೈತರನ್ನು ಹೇಳದೆ ಕೇಳದೆ ಅವರಲ್ಲಿದ್ದಂಥ ದವಸ ಧ್ಯಾನಗಳನ್ನೆಲ್ಲಾ ತೆಗೆದುಕೊಂಡು ಬಂದರು. ಆ ದಿವಸ ಸರ್ಕಾರದವರು ಹಾಗೆ ಮಾಡದೆ ಇದ್ದಿದ್ದರೆ ಆ ರೈತನಿಗೆ ನಾಲ್ಕು ಕಾಸುಗಳು ಫಾಯಿದೆಯಾದರೂ ಸಿಕ್ಕುತ್ತಿತ್ತು.

ಆದರೆ ಆಗ ಸರ್ಕಾರದವರು ಅದಕ್ಕೂ ಅವಕಾಶ ಕೊಡಲಿಲ್ಲ. ಈ ದಿವಸ ಕಂಟ್ರೋಲ್ ಇಲ್ಲ. ಆದರೆ ರೈತನು ಬೆಳೆದ ಬೆಳೆಗಳಿಗೆ ಧಾರಣೆ ಬಿದ್ದು ಹೋಗಿದೆ. ರೈತರು ಮಾರಾಟ ಮಾಡಲು ಈ ದಿವಸ ಮಾರ್ಕೆಟ್ಟಿಗೆ ಸಾಮಾನುಗಳನ್ನು ತಂದರೆ ಅವುಗಳಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಹೀಗೆಲ್ಲಾ ಆಗಿ ಈ ದಿವಸ ಆ ರೈತರ ಸ್ಥಿತಿಗತಿಗಳು ಬಹಳ ಚಿಂತಾಜನಕವಾಗಿವೆ. ಈ ದಿವಸ ಅವರಿಗೆ ಜಮೀನ್ ಕಂದಾಯ ಕೊಡುವುದಕ್ಕೆ ಕೂಡ ಶಕ್ತಿಯಿಲ್ಲದಂತಾಗಿದೆ. ಆದರೆ ಸರ್ಕಾರದವರೇನೋ ಈ ದಿವಸ ಆ ರೈತರಿಗೆ ಉಪಕಾರ ಮಾಡೋಣ ಅನ್ನತಕ್ಕಂಥ ದೃಷ್ಟಿಯಿಂದ ಅವರಿಗೆ ಅನೇಕ ರೀತಿಯಲ್ಲಿ ಸಹಾಯಗಳನ್ನೊದಗಿಸಲು ಏರ್ಪಾಡುಗಳನ್ನು ಮಾಡಿದ್ದಾರೆ. ವ್ಯವಸಾಯದ ಉಪಕರಣಗಳು, ಬೀಜ, ಗೊಬ್ಬರ ಇತ್ಯಾದಿಗಳ ಸಹಾಯವನ್ನೆಲ್ಲಾ ಒದಗಿಸುತ್ತಿದ್ದಾರೆ. ಸರ್ಕಾರದವರು ಅವರಿಗೆ ಇಷ್ಟೆಲ್ಲಾ ಅನುಕೂಲಮಾಡಿದ್ದರೂ ಅವರಿಗೇನೋ ಕಷ್ಟಗಳೂ ಇನ್ನೂ ತಪ್ಪಿಲ್ಲ. ಅವರಿಗೆ ಇರತಕ್ಕ ತೊಂದರೆಗಳು ಇದ್ದೇ ಇವೆ. ಸರ್ಕಾರದವರು ಇತ್ತೀಚೆಗೆ ಹೊರಡಿಸಿರತಕ್ಕ ಕಾನೂನಿನಿಂದ ರೈತನಿಗೆ ಇಷ್ಟು ದಿವಸ ಕೊಡುತ್ತಿದ್ದಂಥ ದರಕ್ಕಿಂತಲೂ ಹೆಚ್ಚಿನ ಕೂಲಿ ದರವನ್ನು ಈ ದಿವಸ ಕೊಡಬೇಕಾಗಿದೆ. ಕಡಮೆ ಕೂಲಿಯಲ್ಲಿ ಕೆಲಸ ಮಾಡಿಸುವುದಕ್ಕೆ ಸಾಧ್ಯವೇ ಇಲ್ಲ. ಈ ಕಾರಣದಿಂದಲೂ ಕೂಡ ಈ ದಿವಸ ಸರ್ಕಾರದವರು ರೈತನ ಬೆಳೆಗಳಿಗೆ ಒಂದು ಧಾರಣೆಯನ್ನು ನಿಗದಿ ಮಾಡಬೇಕಾದುದು ಆವಶ್ಯಕ. ಈ ದಿವಸ ಸರ್ಕಾರ ಯಾವ ತೆರಿಗೆಯನ್ನೇ ಹಾಕಲಿ ಅದು ಕೊನೆಗೆ ಹೋಗಿ ರೈತನ ತಲೆ ಮೇಲೆ ಬೀಳುತ್ತದೆ. ಹೀಗೆ ಎಷ್ಟೇ ತೆರಿಗೆಗಳು ಈ ದಿವಸ ಆತನ ಮೇಲೆ ಬೀಳುತ್ತಿದ್ದರೂ, ಇಂಥ ಹೊರಲಾರದ ತೆರಿಗೆಗಳನ್ನೆಲ್ಲಾ ಆತನು ಮೂಕ ಪ್ರಾಣಿಯಂತೆ ಕೊಟ್ಟುಕೊಂಡು ಹೋಗುತ್ತಿದ್ದಾನೆ. ಹೀಗೆ ರೈತನು ತನಗೆ ಎಷ್ಟೇ ಕಷ್ಟಗಳಿದ್ದಾಗ್ಯೂ, ಸರ್ಕಾರದವರು ಆತನ ಮಕ್ಕಳುಮರಿಗಳಿಗೆ ವಿದ್ಯಾಭ್ಯಾಸ ಮಾಡಲು ಒಂದು ಸ್ಕೂಲನ್ನು ಮತ್ತು ಆತನ ವ್ಯವಸಾಯಕ್ಕೆ ಅನುಕೂಲವಾಗತಕ್ಕಂಥ ಒಂದು ಭಾವಿಯನ್ನು ಒದಗಿಸಿಕೊಟ್ಟರೆ ಆತನು ಎಷ್ಟೋ ಸಂತೋಷಪಟ್ಟುಕೊಳ್ಳುತ್ತಾನೆ. ಆತನಿಗೆ ಸರ್ಕಾರದವರು ಇಷ್ಟನ್ನಾದರೂ ಏತಕ್ಕೆ ಮಾಡಬಾರದು ಎಂದು ಕೇಳುತ್ತೇನೆ. ಆದರೆ ಸರ್ಕಾರದವರು ಬಹಳ ಕನಿಕರಪಟ್ಟು ಈ ದಿವಸ ರೈತರಿಗೆ ಏನೋ ಒಂದು ಸಹಾಯವನ್ನು ನೀಡಬೇಕೆಂಬ ದೃಷ್ಟಿಯಿಂದ, ಬೀಜ, ಗೊಬ್ಬರ ಮತ್ತು ವ್ಯವಸಾಯದ ಉಪಕರಣಗಳನ್ನು ಒದಗಿಸಲು ಒಂದು ಏರ್ಪಾಡನ್ನು ಮಾಡಿದ್ದಾರೆ. ಸರ್ಕಾರದವರ ಉದ್ದೇಶವೇನೋ ಬಹಳ ಒಳ್ಳೆಯದೇ ಆಗಿದೆ. ಆದರೆ ಈ ಇಲಾಖೆಗಳು ಹೇಗೆ ಕೆಲಸ ಮಾಡುತ್ತಿವೆ, ರೈತರಿಗೆ ಸರಾಗವಾಗಿ ಅನುಕೂಲತೆಗಳು ದೊರೆಯುತ್ತಿವೆಯೋ ಅಥವಾ ಇಲ್ಲವೇ, ಈ ಇಲಾಖೆಯವರು ರೈತರಿಗೆ ಉಪಯೋಗವಾಗತಕ್ಕ ರೀತಿಯಲ್ಲಿ ವರ್ತಿಸುತ್ತಿದ್ದಾರೆಯೋ, ರೈತರಿಗೆ ಈ ಯೋಜನೆಯಿಂದೇನಾದರೂ ಅನುಕೂಲ ದೊರೆತಿದೆಯೋ, ಅವರ ಸ್ಥಿತಿಗತಿಗಳು ಉತ್ತಮಗೊಂಡಿವೆಯೋ ಅನ್ನತಕ್ಕ ಕಡೆಗೆ ಮಾತ್ರ ಯಾರೂ ನೋಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಸರ್ಕಾರದವರು ಈ ದಿವಸ ರೈತರ ಅನುಕೂಲಕ್ಕಾಗಿಯೇ ಟ್ರಾಕ್ಟರುಗಳನ್ನು ತರಿಸಿಕೊಟ್ಟಿದ್ದಾರೆ. ಆದರೆ ಅವು ದಿನಕ್ಕೆ ಎರಡು ಘಂಟೆ ಕೂಡ ಕೆಲಸ ಮಾಡುತ್ತಿಲ್ಲವೆಂದು ತಿಳಿಸಲು [illegible] ವಿಷಾದವಾಗುತ್ತದೆ. ಈ ವಿಷಯಗಳನ್ನೆಲ್ಲಾ ಸರ್ಕಾರದವರು ಆಲೋಚನೆ ಮಾಡಬೇಕಾಗಿತ್ತೆಂದೂ ಮತ್ತು ಈಗಲಾದರೂ ಇವುಗಳನ್ನು ಪರಿಶೀಲನೆ ಮಾಡತಕ್ಕದ್ದು ಅಗತ್ಯವೆಂದು ನಾನು ಹೇಳುತ್ತೇನೆ.

ಇನ್ನು ಇದೇ ರೀತಿಯಾಗಿ ರೈತರ ಅನುಕೂಲಕ್ಕೆ ಎಂದು ಅನೇಕ ಸೊಸೈಟಿಗಳನ್ನೂ ಮತ್ತು ಬ್ಯಾಂಕುಗಳನ್ನೂ ತೆರದಿದ್ದಾರೆ. ಇದರಲ್ಲಿ ಸರ್ಕಾರದವರ ಉದ್ದೇಶವೇನೋ ಬಹಳ ಒಳ್ಳೆಯದೇ. ಆದರೆ ಅವುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ಸಂಸ್ಥೆಗಳಲ್ಲಿ ವಿಶೇಷವಾಗಿ ಹಣ ಪೋಲಾಗಿದೆ. ನಾನು ಈಗಾಗಲೇ ಈ ವಿಚಾರವನ್ನು ಅನೇಕಾವರ್ತಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಸರ್ಕಾರದವರ ಗಮನವನ್ನು ಈ ವಿಚಾರಕ್ಕೆ ಇಷ್ಟು ಸೆಳೆದಿದ್ದರೂ ಏನೂ ಕಾರ್ಯಕ್ರಮಗಳು ಈ ಬಗ್ಗೆ ಜರುಗಿಲ್ಲ. ನಮ್ಮ ಚಿಕ್ಕಮಗಳೂರಿನಲ್ಲಿ ಒಂದು ಸೊಸೈಟಿಯಿದೆ. ಅದರಲ್ಲಿ ಸುಮಾರು 25 ಸಾವಿರದವರೆಗೂ ಹಣ ದುರುಪಯೋಗವಾಗಿದೆ. ಇಂಥ ಅವ್ಯವಸ್ಥೆ ಉಂಟಾಗಿರುವುದನ್ನು ನೋಡಿ ಅಲ್ಲಿನ ಪುರಜನರಿಗೆಲ್ಲಾ ತುಂಬ ವ್ಯಥೆಯಾಗಿದೆ. ಈ ಸಂಸ್ಥೆಗಳು ಹೀಗೆಲ್ಲಾ ಈ ದಿವಸ ನಡೆಸುತ್ತಿರುವುದರಿಂದ ರೈತರಿಗೆ ತುಂಬ ಅನಾನುಕೂಲವಾಗಿದೆ. ಆದುದರಿಂದ ಸರ್ಕಾರದವರು ಹೀಗೇನಾದರೂ ಒಂದು ಯೋಜನೆಯನ್ನು ಮಾಡಿದ ಮೇಲೆ ಅದರ ಪರಿಣಾಮವಾಗಿ ರೈತರಿಗೇನಾದರೂ ಅನುಕೂಲವಾಗಿವೆಯೋ ಅಥವಾ ಇದರಿಂದ ಪ್ರತಿಕೂಲವಾಗಿದೆಯೋ ಎಂಬುದನ್ನು ಪರಿಶೀಲಿಸುವುದು ತೀರ ಆವಶ್ಯಕವಾದದ್ದು. ಈಗಲಾದರೂ ಸಹ ಸರ್ಕಾರದವರು ಈ ಬಗ್ಗೆ ಒಂದು ಹೆಚ್ಚಿನ ನಿಗಾ ವಹಿಸಿ ನೋಡಿಕೊಳ್ಳಬೇಕೆಂದು ನಾನು ಅವರಿಗೆ ಒತ್ತಾಯ ಪೂರ್ವಕವಾಗಿ ತಿಳಿಸಲು ಇಚ್ಛಿಸುತ್ತೇನೆ.

ಇನ್ನು ಮಲೆನಾಡಿನಲ್ಲಿ ಏಲಕ್ಕಿ ಬೆಳೆಯುತಕ್ಕಂಥ ರೈತರ ವಿಚಾರದಲ್ಲಿ ಎರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ.—ಮಲೆನಾಡಿನ ರೈತರು ತಮ್ಮ ನಿತ್ಯದ ವ್ಯವಸಾಯದ ಜೊತೆಗೆ ಸ್ವಲ್ಪ ಸ್ವಲ್ಪವಾಗಿ ಈ ಕಾಫಿ—ಏಲಕ್ಕಿ ಇವುಗಳ ವ್ಯವಸಾಯವನ್ನೂ ಕೂಡ ಮಾಡುತ್ತಿದ್ದಾರೆ. 1945 ರ ತನಕ ವರ್ಷಂಪ್ರತಿ ಅಲ್ಲಿ ಸಾವಿರಾರು ಮಣ ಏಲಕ್ಕಿಯನ್ನು ಬೆಳೆಯಲಾಗುತ್ತಿತ್ತು. ಆಗ ವರ್ಷಕ್ಕೆ 60 ಸಾವಿರ ಮಣಗಳವರೆಗೂ ಆಗುತ್ತಿದ್ದಂಥ ಬೆಳೆ ಈಗ 1955ರಲ್ಲಿ ಕೇವಲ 10 ಸಾವಿರ ಮಣಕ್ಕೆ ಇಳಿದಿದೆ. ಹೀಗಾಗುವುದಕ್ಕೆ ಕಾರಣ ಏನೇನೆಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾಗಿದೆ. ಇದಕ್ಕಾಗಿ ನಾನು ಕಳೆದ ಎರಡು ವರ್ಷಗಳಿಂದಲೂ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸುತ್ತಿದ್ದೇನೆ. ಆದರೇನೂ ಸಾರ್ಥಕವಾಗಿಲ್ಲ. ಈ ಕಾಫಿ ಮತ್ತು ಏಲಕ್ಕಿ ಇವೆರಡೂ ಮಲೆನಾಡಿನ ಸಂಪತ್ತುಗಳು. ಈ ದಿವಸ ಈ ಎರಡು ಬೆಳೆಗಳೂ ಹಾಳಾಗಿ ಹೋಗಿರತಕ್ಕದ್ದು ಆ ನಮ್ಮ ಇಡೀ ಮಲೆನಾಡಿನ ಸಂಪತ್ತೆಲ್ಲವೂ ಹಾಳಾದಂತಾಗಿದೆ. ಹೀಗೆ ಈ ಬೆಳೆಗಳು ಇಷ್ಟೊಂದು ಹೀನಸ್ಥಿತಿಗೆ ಬರಲು ಕಾರಣವೇನೆಂಬುದನ್ನು ಸರ್ಕಾರದವರು ಈಗಲಾದರೂ ಬೇಗ ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ—ಇದಕ್ಕಾಗಿಯೇ ನಾವು ಸರ್ಕಾರದವರನ್ನು ಮೂಡಿಗೆರೆಯಲ್ಲಿ ಒಂದು ಏಲಕ್ಕಿ ಸಂಶೋಧನಾಲಯವನ್ನು ಸ್ಥಾಪಿಸಿ ಎಂದು ಕಳೆದ ಎರಡು ವರ್ಷಗಳಿಂದಲೂ ಒತ್ತಾಯಪಡಿಸುತ್ತಿದ್ದೇವೆ. ಆದಾಗ್ಯೂ ಸರ್ಕಾರದವರಿನ್ನೂ ಆ ವಿಚಾರಕ್ಕೆ ಗಮನ ಕೊಟ್ಟಿಲ್ಲ.

ಈಗ ಸರ್ಕಾರದವರು ಒಂದು ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಸಕಲೇಶಪುರದಲ್ಲಿ ಸ್ಥಾಪನೆ ಮಾಡಿದ್ದಾರೆ. ಅಲ್ಲಿ ರೈತರು ಬೆಳೆದ ಸಾಮಾನುಗಳಿಗೆ ಸರಿ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಯಾದ ಬೆಲೆ ಸಿಕ್ಕುತ್ತಿಲ್ಲ. ಅಲ್ಲಿಯ ರೈತರು ದಿನವೆಲ್ಲಾ ಕಾಳಿಟು ವ್ಯಾಪಾರ ಮಾಡಬೇಕಾಗಿದೆ. ಹೀಗಾಗಿ ಈ ರೆಗ್ಯುಲೇಟೆಡ್ ಮಾರ್ಕೆಟ್ಟಿನಿಂದ ರೈತರಿಗೆ ಅನುಕೂಲವಾಗುವುದಕ್ಕೆ ಬದಲಾಗಿ ಅನಾನುಕೂಲವಾಗುತ್ತಿದೆ. ಆದಕಾರಣ ನಾನು ಸರ್ಕಾರದವರಿಗೆ ಮತ್ತೊಮ್ಮೆ ಹೇಳಬೇಕಾಗಿರುವುದೇನೆಂದರೆ, ಈ ದಿವಸ ರೈತನ ಕಷ್ಟಗಳೇನಿವೆ ಎಂಬುದನ್ನು ಸರ್ಕಾರದವರು ತಿಳಿಯತಕ್ಕದ್ದು ತುಂಬ ಅಗತ್ಯ ಮತ್ತು ಆವಶ್ಯಕ ಎಂದು ಹೇಳಲಿಚ್ಛಿಸುತ್ತೇನೆ. ಆದರೆ ನಾನೇನೂ ಆ ಸಕಲೇಶಪುರಕ್ಕೆ ಹೋಗಿಲ್ಲ. ಕೇಳಿದ್ದರಲ್ಲಿ ಜನರು ದಿನವೆಲ್ಲಾ ಅಲ್ಲಿ ತಮ್ಮ ಸಾಮಾನುಗಳನ್ನು ಇಟ್ಟುಕೊಂಡು ಮಾರಾಟ ಮಾಡಬೇಕಾಗಿದೆಯಂತೆ. ಅಲ್ಲಿಗೆ ಹಾವೇರಿ ಕಡೆಯಿಂದ ಜನರು ಬಂದರೇನೇ ವ್ಯಾಪಾರ. ಇಲ್ಲದಿದ್ದರೆ ಇಲ್ಲ. ಈ ಸೊಸೈಟಿಯವರು ರೈತರ ಸಾಮಾನುಗಳನ್ನು ಇಟ್ಟುಕೊಂಡು ಅವುಗಳನ್ನು ಒಂದು ಸರಿಯಾದ ಧಾರಣೆ ಬರುವತನಕ ಸ್ಟಾಕಿಟ್ಟಿದ್ದು ಅನಂತರ ಮಾರಾಟ ಮಾಡಿದ್ದರೆ ರೈತನಿಗೆ ಕೊಂಚ ಅನುಕೂಲವಾಗುತ್ತಿತ್ತು. ಆದರೆ ಈ ದಿವಸ ಈ ಸೊಸೈಟಿಯಿಂದ ನಮ್ಮ ರೈತರಿಗೇನೂ ಅನುಕೂಲವಾಗುತ್ತಿಲ್ಲ. ಆದುದರಿಂದ ತಾವೀಗ ಈ ಮಾರ್ಕೆಟಿಂಗ್ ಸೊಸೈಟಿಯನ್ನು ಉತ್ತಮ ರೀತಿಯಲ್ಲಿ ನಡೆಸುವಂತೆ ಪ್ರಯತ್ನಪಡಬೇಕು. ಈ ದಿವಸ ತಾವು ಕಾಫಿ ಬೀಜದ ಬಗ್ಗೆ ಕಾಫಿ ಬೋರ್ಡ್ ಎಂದು ಏನೊಂದು ಬೋರ್ಡನ್ನು ಮಾಡಿದ್ದೀರೋ ಅದೇ ಮಾದರಿಯಲ್ಲಿ ಈ ಏಲಕ್ಕಿ ವಿಚಾರಕ್ಕೂ ಸಹ ಒಂದು ಬೋರ್ಡ್‌ನ್ನು ಸ್ಥಾಪಿಸಬೇಕೆಂದು ಹೇಳುತ್ತೇನೆ. ಹೀಗೊಂದು ಏರ್ಪಾಡನ್ನು ಮಾಡಿ ಪರದೇಶದಲ್ಲಿರತಕ್ಕ ನಮ್ಮ ಟ್ರೇಡ್ ಏಜಂಟರುಗಳ ಮತ್ತು ಟ್ರೇಡ್ ಕಮಿಷನರುಗಳ ಮೂಲಕ ಏಲಕ್ಕಿಗೂ ಸಹ ಪರದೇಶದ ಗಿರಾಕಿಗಳನ್ನು ಹುಡುಕಬೇಕೆಂದು ಹೇಳುತ್ತೇನೆ. ಹೀಗೆ ಪರದೇಶದ ಗಿರಾಕಿಗಳನ್ನು ಹಿಡಿದರೆ ನಮಗೆ ಡಾಲರ್ ಎಕ್ಸ್‌ಛೇಂಜಿನ ತೊಂದರೆ ಕೂಡ ಸ್ವಲ್ಪ ಮಟ್ಟಿಗೆ ತಪ್ಪುತ್ತದೆ, ರೈತರಿಗೂ ಸಹ ಕೊಂಚ ಅನುಕೂಲವಾಗುತ್ತದೆ. ಆದಕಾರಣ ತಾವು ಮೊದಲು ಈ ಬೋರ್ಡನ್ನು ಸ್ಥಾಪಿಸಬೇಕೆಂದು ಹೇಳುತ್ತೇನೆ.

ಈ ದಿವಸ ಏಲಕ್ಕಿ ಬೆಳೆಗೆ ಯಾವುದೋ ಒಂದು ಬಲವಾದ ರೋಗ ಬಂದಿದೆ. ಇದರಿಂದ ರೈತರು ಹಾಳಾಗಿ ಹೋಗುತ್ತಿದ್ದಾರೆ. ಹೀಗೆ ರೈತರು ಅನೇಕ ದಿವಸಗಳಿಂದ ಅನೇಕ ರೀತಿಯ ಕಷ್ಟನಷ್ಟಗಳಿಗೆ ಗುರಿಯಾಗಿ ಅದರ ಪರಿಣಾಮದಿಂದ ಅವರೆಲ್ಲರೂ ಸಾಲಗಾರರಾಗಿ ಬಹಳ ಹೀನಸ್ಥಿತಿಗೆ ಬರಲು ಕಾರಣವಾಗಿದೆ. ಸರ್ಕಾರದವರು ಈ ರೈತರ ಯೋಗಕ್ಷೇಮಗಳ ಕಡೆಗೆ ದೀರ್ಘಕಾಲಾವಧಿಯಿಂದಲೂ ಯಾವ ನಿಗವನ್ನೂ ತೆಗೆದುಕೊಳ್ಳದೆ ಹೋದದ್ದೇ ಈ ದಿವಸ ಅವರ ದುರ್ದೆಶೆಗೆ ಮುಖ್ಯ ಕಾರಣವೆಂದು ನಾನು ಹೇಳದೇ ವಿಧಿಯಿಲ್ಲ. ಸರ್ಕಾರದವರು ತೆರೆದ ಕಣ್ಣಿನಿಂದ ಆ ರೈತನ ಸಂಪಾದನೆ ಏನು, ಆತನ ಖರ್ಚೇನು, ಆತನಿಗೇನು ಉತ್ಪತ್ತಿಯಿದೆ ಅನ್ನುವುದನ್ನು ವಿಮರ್ಶೆಮಾಡಲು ಪ್ರಯತ್ನಿಸಿದ್ದರೆ ಈ ದಿವಸ ಆ ರೈತನ ಕಷ್ಟ ಸುಖಗಳೇನೆಂಬುದು ಗೊತ್ತಾಗುತ್ತಿದ್ದುವು. ಮಲೆನಾಡಿನಲ್ಲಿ ಒಂದು ಏಲಕ್ಕಿ ಬೋರ್ಡನ್ನು ಸ್ಥಾಪಿಸಿ ಎಂದು ನಾವು ಇಲ್ಲಿಗೆ ಕಳೆದ ಎರಡು ಮೂರು ವರ್ಷಗಳಿಂದಲೂ ಒತ್ತಾಯಪಡಿಸುತ್ತ ಬರುತ್ತಿದ್ದಾಗ್ಯೂ ಮಂತ್ರಿಗಳು ಈ ಹೊತ್ತಿಗೂ ಇನ್ನೂ ಪತ್ರ ವ್ಯವಹಾರವನ್ನು ಕೇಂದ್ರದೊಡನೆ ನಡೆಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೆಯೇ ಶಿವಾಯಿ ಈ ತಹಲ್‌ವರೆಗೂ ಅಲ್ಲಿ ಈ ಬೋರ್ಡನ್ನೇನೂ ಸ್ಥಾಪನೆ ಮಾಡಿಲ್ಲ. ಈಗಲಾದರೂ ಅದನ್ನು ಜಾಗ್ರತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಈ ವಿಚಾರವಾಗಿ ನಾನು ಸರ್ಕಾರಕ್ಕೂ ಕೂಡ ಎಷ್ಟೋ ಕಾಗದ ಪತ್ರಗಳನ್ನು ನಡೆಸಿದ್ದೇನೆ. ಈ ಸಭೆಯಲ್ಲಿ ಕೂಡ ಅನೇಕ ಸಾರ್ತಿ ತಿಳಿಸಿದ್ದೇನೆ. ಆ ಪ್ರದೇಶದ ಜನಗಳು ಬೇರೆ ಈ ಬಗ್ಗೆ ಮೀಟಿಂಗ್‌ಗಳನ್ನು ಮಾಡಿ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದರೆ ಯಾವ ಅನುಕೂಲವೂ ಇನ್ನೂ ಆಗಿಲ್ಲ. ಹೀಗಾಗಿ ಈ ದಿವಸ ರೈತರು ವ್ಯಾಪಾರಸ್ಥರ ಕೈಗೆ ಸಿಕ್ಕಿ ನರಳುತ್ತಿದ್ದಾರೆ. ದೊಡ್ಡ ದೊಡ್ಡ ವ್ಯಾಪಾರಸ್ಥರು ರೈತರ ಅಡಚಣೆಗಳನ್ನೇ ಕಾದುಕೊಂಡಿದ್ದು ಅವರ ಸರಕುಗಳನ್ನು ತೀರ ಅಗ್ಗದ ದರದಲ್ಲಿ ಕೊಂಡಿಟ್ಟುಕೊಂಡು ಅಧಿಕ ಲಾಭಕ್ಕೆ ಮಾರಾಟ ಮಾಡುತ್ತಿದ್ದಾರೆ. ಆದರೆ ಈ ತೊಂದರೆಗಳನ್ನೆಲ್ಲಾ ತಪ್ಪಿಸಲು ಸರ್ಕಾರದವರು ಸರಿಯಾದ ಒಂದು ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಓಪನ್‌ಮಾಡಿ ರೈತರ ಸಾಮಾನುಗಳನ್ನು ಅಲ್ಲಿ ಒಂದು ಸರಿಯಾದ ಬೆಲೆ ಬರುವ ತನಕ ಇಟ್ಟುಕೊಂಡಿರತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿ, ಸರಿಯಾದ ಧಾರಣೆ ಬಂದಾಗ ಅವುಗಳನ್ನು ಮಾರಾಟ ಮಾಡುವಂತೆ ಒಂದು ವ್ಯವಸ್ಥೆ ಮಾಡಿದರೆ ರೈತರಿಗೆ ಅದರಿಂದ ನಾಲ್ಕು ಕಾಸು ಆದಾಯ ಬರಲು ಮಾರ್ಗವಾಗುತ್ತದೆ. ಆದರೆ ಈಗ ಇಂಥ ಅನುಕೂಲಗಳು ಯಾವುವೂ ಇಲ್ಲ. ಆದಕಾರಣ ಸರ್ಕಾರದವರು ಈ ದಿವಸ ಏಲಕ್ಕಿ ಬೆಲೆಯನ್ನು ಸಹ ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ನಾನು ಪಕ್ಕಾ ರೈತ. ರೈತರ ವಿಚಾರವೆಲ್ಲಾ ನನಗೆ ಚೆನ್ನಾಗಿ ಗೊತ್ತಿದೆ. ಈ ದಿವಸ ಸರ್ಕಾರದವರು ರೈತನು ಬೆಳೆದ ದವಸಗಳಿಗೆ ಒಂದು ಸರಿಯಾದ ಬೆಲೆಯು ಸಿಕ್ಕುವಂತೆ ಮಾಡಲು ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ ತಂದಿದ್ದಾರೆ. ಈ ಆಕ್ಟಿಗನುಗುಣವಾಗಿ ಸಂಸ್ಥಾನದಲ್ಲಿ ಕೆಲವು ಕಡೆ ಅಲ್ಲಲ್ಲೇ ಮಾರ್ಕೆಟಿಂಗ್ ಸೊಸೈಟಿಗಳೂ ಸ್ಥಾಪನೆಯಾದವು. ಈ ಆಕ್ಟಿನ ಅನುಕೂಲತೆಯನ್ನು ಸರ್ಕಾರದವರು ಇಡೀ ಸಂಸ್ಥಾನಾದ್ಯಂತವೂ ಒಂದೇ ಸಮನಾಗಿ ಜಾರಿಗೆ ತರಲಿಲ್ಲ. ಹೋಗಲಿ ಕೆಲವು ಕಡೆಗಳಲ್ಲಾದರೂ ಅವುಗಳನ್ನು ಜಾರಿಗೆ ತಂದಿದ್ದಾರೆ ಎಂದು ಅನ್ನೋಣವೆಂದರೆ ಆ ಕೆಲವು ಸೊಸೈಟಿಗಳಾದರೋ ಅವು ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವುಗಳನ್ನು ಈ ದಿವಸ ಸರ್ಕಾರದವರು ಒಂದು ಸುವ್ಯವಸ್ಥಿತಿಯಿಂದ ನಡೆಯುವಂತೆ ಮಾಡಿಲ್ಲ. ಸರ್ಕಾರದವರು ಏತಕ್ಕಾಗಿ ಹೀಗೆ ಮಾಡುತ್ತಿದ್ದಾರೆ ಅನ್ನುವುದೇ ನನಗೆ ಗೊತ್ತಾಗುತ್ತಿಲ್ಲ. ಈ ದಿವಸ ನಮ್ಮ ಸಂಸ್ಥಾನದಲ್ಲಿ ಕೇವಲ 9 ಜಾಗಗಳಲ್ಲಿ ಈ ಮಾರ್ಕೆಟಿಂಗ್ ಸೊಸೈಟಿಗಳನ್ನು ಜಾರಿಗೆ ತಂದಿದ್ದಾರೆ. ಈ ಸಂಸ್ಥೆಗಳನ್ನು ಇಡೀ ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕೆಂದೂ ಮತ್ತು ಇವುಗಳನ್ನು ಒಂದು ಸುವ್ಯವಸ್ಥೆಯಿಂದ ನಡೆಸಬೇಕೆಂದೂ ಹೇಳುತ್ತೇನೆ. ಅಂತೂ ಈ ದಿವಸ ಈ ಸಂಸ್ಥೆಗಳೆಲ್ಲಾ ಇನ್ನೂ ಬಾಲ್ಯಾವಸ್ಥೆಯಲ್ಲೇ ಇರುತ್ತವೆ. ಇದರಿಂದ ರೈತನಿಗೆ ಈ ದಿವಸ ಒಂದು ಸರಿಯಾದ ಬೆಲೆಯು ಆತನ ದಿನಸುಗಳಿಗೆ ಸಿಕ್ಕುವುದಕ್ಕೆ ಅವಕಾಶವಿಲ್ಲದಂತಾಗಿದೆ. ಆದುದರಿಂದ ಸರ್ಕಾರದವರು ಸರಿಯಾದ ಸುವ್ಯವಸ್ಥೆಯಿಂದ ಈ ಸೊಸೈಟಿಗಳನ್ನು ಸಂಸ್ಥಾನಾದ್ಯಂತವೂ ಜಾರಿಗೆ ತಂದು ರೈತರಿಗೊಂದು ಅನುಕೂಲ ಕಲ್ಪಿಸಿ ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದಿವಸ ಇಂಥ ದೊಡ್ಡ ಬೆಂಗ

ಳೂರು ನಗರದಲ್ಲಿ ಕೂಡ ಒಂದು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿಯಿಲ್ಲ. ಇದು ಬಹಳ ಶೋಚನೀಯ. ಇಲ್ಲಿ ರೈತನ ದವಸ ಧಾನ್ಯಗಳಿಗೆ ಬೆಲೆ ಹೇಗೆ ಸಿಕ್ಕುತ್ತಿದೆ ಅನ್ನುವುದೇ ಗೊತ್ತಾಗುವುದಿಲ್ಲ. ಆದುದರಿಂದ ಈ ಸೊಸೈಟಿಗಳ ಅಕ್ಟನ್ನು ಬೇಗ ಸಂಸ್ಥಾನಾದ್ಯಂತವೂ ಜಾರಿಗೆ ತಂದು ರೈತರಿಗೆ ಅನುಕೂಲ ಪಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ರೆಗ್ಯುಲೇಟೆಡ್ ಮಾರ್ಕೆಟ್ಟುಗಳನ್ನಿಟ್ಟಿರುವ ಸ್ಥಳಗಳಲ್ಲಿ ಕಟ್ಟಡಗಳಿಲ್ಲದೆ ಈ ಕಾನೂನು ಸರಿಯಾಗಿ ಜಾರಿಗೆ ಬರುವುದಕ್ಕೆ ಅನಾನುಕೂಲವಾಗುತ್ತಿದೆ. ಆದುದರಿಂದ ಎಲ್ಲೆಲ್ಲಿ ಮಾರ್ಕೆಟಿಂಗ್ ಕಾನೂನು ಜಾರಿಗೆ ಬರುತ್ತದೆಯೋ ಅಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ, ಈ ಇಲಾಖೆಗೇ ಒಬ್ಬರು ದಕ್ಷರಾದ ಮತ್ತು ಅನುಭವ ಪಡೆದ ಅಧಿಕಾರಿಯನ್ನು ನೇಮಕಮಾಡಬೇಕಾದುದು ಅತ್ಯಾವಶ್ಯಕ. ಈ ಅನುಭವ ಪಡೆಯಲು ಪರದೇಶಕ್ಕೆ ಒಬ್ಬರನ್ನು ಸರ್ಕಾರದವರು ನಲವತ್ತು ಐವತ್ತು ಸಾವಿರ ರೂಪಾಯಿ ಖರ್ಚು ಮಾಡಿ ಕಳುಹಿಸಿದ್ದರು. ಅವರ ಅನುಭವವನ್ನು ನಮ್ಮ ದೇಶದಲ್ಲಿ ಉಪಯೋಗಿಸಿಕೊಳ್ಳದೇ ಇರುವುದು ಬಹಳ ಅನ್ಯಾಯ. ಶ್ರೀ ಪೀತಾಂಬರರಾವ್ ಎಂಬವರು ಈ ರೀತಿ ಅನುಭವ ಪಡೆದು ಬಂದಿದ್ದಾರೆ. ಅವರನ್ನು ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ಮಾಡಿ, ರೈತನಿಗೆ ಸಹಾಯ ಮಾಡುವ ಸರ್ಕಾರದ ಉದ್ದೇಶವನ್ನು ಕಾರ್ಯಗತ ಮಾಡುವುದು ಆವಶ್ಯಕ. ಹಾಗಿಲ್ಲದೆ ಈ ಕಾನೂನನ್ನು ಒಂದು ಕಡೆ ಜಾರಿ ಮಾಡಿ ಇನ್ನೊಂದು ಕಡೆ ಮಾಡದೇ ಹೋದರೆ ತೊಂದರೆಯಾಗುತ್ತದೆ. ಮಾರ್ಕೆಟ್ಟಿಗೆ ರೈತ ತೆಗೆದುಕೊಂಡು ಹೋದ ಪದಾರ್ಥಗಳಿಗೆ ಒಂದುಕಡೆ ಒಂದು ಬೆಲೆ ಇನ್ನೊಂದು ಕಡೆ ಇನ್ನೊಂದು ಬೆಲೆ ದೊರಕಿ ತೊಂದರೆಯಾಗುತ್ತದಲ್ಲದೆ ವರ್ತಕನಿಗೂ ಅನುಕೂಲವಾಗುವುದಿಲ್ಲ. ಇದರಿಂದ ಸರ್ಕಾರದ ಉದ್ದೇಶ ಸಫಲವಾಗುವುದಿಲ್ಲ. ಆದಕಾರಣ ಈ ಮಾರ್ಕೆಟ್ಟುಗಳಿಗೆ ಏನು ಅನುಕೂಲಬೇಕೋ ಅದನ್ನು ಕಲ್ಪಿಸಿ, ದಕ್ಷರಾದ ಅಧಿಕಾರಿಯನ್ನು ನೇಮಕ ಮಾಡಿ ಬಹುಮಟ್ಟಿಗೆ ಇದನ್ನು ಮುಂದುವರಿಸಬೇಕು.

ಇನ್ನೊಂದು ವಿಷಯವನ್ನು ಕೇಳಿದ್ದೇನೆ. All-India Agricultural Ministers' Conference ನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಕಾನೂನಿಗೆ ಪ್ರಾಮುಖ್ಯತೆ ಕೊಡಬೇಕೆಂದು ನಿರ್ಣಯ ಅಂಗೀಕೃತವಾಗಿದೆ. ಆದುದರಿಂದ ಜಾಗ್ರತೆ ಸರಿಯಾದ ಏರ್ಪಾಡು ಮಾಡುವುದು ಸೂಕ್ತ. ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿ ಮುಖ್ಯವಾದ ಬೆಳೆ ತೆಂಗು. ಅಲ್ಲಿ ಒಂದು ಸಂಶೋಧನಾಲಯವನ್ನೇರ್ಪಡಿಸಿ ಪ್ರತಿ ವರ್ಷವೂ ಸಸಿಗಳನ್ನು ಮಾರುತ್ತಿದ್ದಾರೆ; ವರ್ಷಕ್ಕೆ ಹತ್ತು ಸಾವಿರ ರೂಪಾಯಿವರೆಗೆ ನಷ್ಟವಾಗುತ್ತಿದೆಯೆಂದು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಏನೇ ಆಗಲಿ ತೆಂಗಿನ ಬೆಳೆ ಸಂಶೋಧನಾಲಯ ಕೇಂದ್ರವನ್ನು ಅಭಿವೃದ್ಧಿಮಾಡಿ ರೈತರಿಗೆ ಒಳ್ಳೆಯ ಬೀಜ ದೊರಕುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ವ್ಯವಸಾಯ ಇಲಾಖೆಯಲ್ಲಿ regional farms, experimental farms, demonstration farms ಎಂದಿವೆ. ಇವು ನಾಜೂಕಯ್ಯನ ಪಾರ್ಟು ಮಾಡುತ್ತಿವೆಯೆಂದು ಕಾಣುತ್ತದೆ. ಇವುಗಳಿಗೆ ಎಷ್ಟು ಖರ್ಚು ಮಾಡುತ್ತಿದ್ದೇವೋ ಅಷ್ಟು ಆದಾಯ ಬರುತ್ತಿಲ್ಲ. ಇದನ್ನು ನಾನು ಎಷ್ಟೋ ಸಾರಿ ತಿಳಿಸಿದ್ದೇನೆ. ಜನರಿಗೆ ಅನುಕೂಲವಾಗುವುದಕ್ಕೆಂದು ಇವುಗಳನ್ನು ನೀವು ಬರಿಯ ಪ್ರಚಾರಕ್ಕಿಟ್ಟಿದ್ದೀರೇ ಹೊರತು ಉತ್ಪತ್ತಿಗಾಗಲ್ಲ. ಇದರಿಂದ ಪಕ್ಕದಲ್ಲಿರುವ ರೈತರಲ್ಲಿ ಒಂದು ರೀತಿಯ ಪ್ರಚಾರವಾಗುತ್ತಿದೆ. ಅವರಿಗಿಂತ ಹೆಚ್ಚು ಖರ್ಚುಮಾಡಿ ಆ ರೈತರಿಗಿಂತ ಕಡಮೆ ಬೆಳೆಯುತ್ತಿದ್ದಾರೆ. ಈ ಬುದ್ಧಿಯನ್ನು ರೈತರೂ ಕಲಿತು, ವ್ಯವಸಾಯ ಎಲ್ಲಿ ಹಾಳಾಗುತ್ತದೆಯೋ ಎಂಬ ಭಯ ಹುಟ್ಟಿದೆ. ಮಾನ್ಯ ಮಂತ್ರಿಗಳು ಚಾಮರಾಜನಗರಕ್ಕೆ ಬಂದಾಗ ಹರಪನಹಳ್ಳಿ ಫಾರಂ ನೋಡಿದ್ದಾರೆ. ಅಲ್ಲಿ ಮೂವತ್ತು ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದರು. ಈ ವರ್ಷ ಮೊದಲಿನಷ್ಟು ನಷ್ಟವಾಗಿಲ್ಲ, 1,400 ರೂಪಾಯಿ ಮಾತ್ರ ಬಂದಿದೆ. ಐದಾರು ಸಾವಿರ ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ. ನಿಜವಾಗಿ ಇದು ಶೋಚನೀಯವಾದ ವಿಷಯ. ಸರ್ಕಾರದಲ್ಲಿ ಉತ್ಪತ್ತಿ ಹೆಚ್ಚಾಗುವುದು ಬಿಟ್ಟು ನಷ್ಟ ಹೆಚ್ಚುತ್ತಿದ್ದರೆ ಯಾವರೀತಿ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ?

ವಿದ್ಯಾ ಸುಧಾರಣೆ ಜಾರಿಗೆ ಬರುತ್ತಿದೆ. ಪ್ರತಿಯೊಂದು ಸ್ಕೂಲಿನಲ್ಲಿಯೂ ವ್ಯವಸಾಯ ಶಿಕ್ಷಣ ಕೊಡಬೇಕೆಂದಿದೆ. ಇದು ವ್ಯವಸಾಯದ ದೇಶವಾದುದರಿಂದ ರೈತರ ಮಕ್ಕಳಿಗೆ ವ್ಯವಸಾಯದ ವಿಷಯವನ್ನು ತಿಳಿಸಬೇಕೆಂದಿದೆ. ಈ regional farms, demonstration farms ಮತ್ತು experimental farms ಮೂಲಕ ಮಾಡಿಸಿದರೆ ಸರ್ಕಾರಕ್ಕೆ ಹೆಚ್ಚು ಖರ್ಚು ಬೀಳುವುದಿಲ್ಲ. ಹಳ್ಳಿಗಳ ಸ್ಕೂಲುಗಳಲ್ಲಿ ಇದನ್ನು ಮಾಡಿದರೆ ಒಳ್ಳೆಯದೆಂದು ಹೇಳಿದ್ದೇನೆ. ಹರಪನಹಳ್ಳಿಯಲ್ಲಿ ಇದನ್ನು ಮಾಡಬಹುದೆಂದು ಹೇಳಿದಾಗ ನಷ್ಟವಾಗುತ್ತದೆ, ಸಾಧ್ಯವಿಲ್ಲವೆಂದು ಡೈರೆಕ್ಟರು ಹೇಳಿದರು. ಈ ರೀತಿ ಏರ್ಪಾಡು ಮಾಡಿದರೆ ತಮಗೆ ಕೆಲಸ ಎಲ್ಲಿ ಹೆಚ್ಚಾಗುತ್ತದೆಯೋ ಎಂಬ ಭಯ ಅವರಿಗೆ; ಹೆಚ್ಚಿಗೆ ಕೆಲಸವನ್ನು ತಾವೇಕೆ ಮಾಡಬೇಕೆಂಬ ಅಭಿಪ್ರಾಯ. ವ್ಯವಸಾಯದ ಫಾರಂಗಳು ಹೊರಟು ಹೋಗಬೇಕೆಂಬುದು ನನ್ನ ಉದ್ದೇಶವಲ್ಲ. ಸ್ಕೂಲುಗಳಿಗೂ ಇವುಗಳಿಂದ ಉಪಯೋಗವಾಗಲೆಂಬುದು ನನ್ನ ಉದ್ದೇಶ. 62 ಸಾವಿರ ರೂಪಾಯಿ ಖರ್ಚುಮಾಡಿ ಮೂರು ಕಟ್ಟಡಗಳನ್ನು ಕಟ್ಟಿದ್ದಾರೆ. ಸ್ಕೂಲಿಗೆ ಸಿಬ್ಬಂದಿ ಇದೆ. ಯೋಗ್ಯತೆ ಇರುವವರಿದ್ದಾರೆ. ಸ್ವಲ್ಪ ಫರ್ನಿಚರ್ ಬೇಕಾಗಬಹುದು. ಆದುದರಿಂದ ಹೆಚ್ಚಿಗೆ ಖರ್ಚಿರುವುದಿಲ್ಲ ಎಂದು ಹೇಳಿದರೆ ಕಾರ್ಯಗತ ಮಾಡದೇ ಇರುವುದು ಶೋಚನೀಯ. ಚಾಮರಾಜನಗರ ಒಂದರಲ್ಲೇ ಅಲ್ಲ; ಎಲ್ಲೆಲ್ಲಿ ವ್ಯವಸಾಯದ ಫಾರಮ್ಮುಗಳಿವೆಯೋ ಅಲ್ಲೆಲ್ಲಾ ಮಾಡಬಹುದು.

ಇನ್ನು ಟ್ರಾಕ್ಟರುಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸರ್ಕಾರದಿಂದ ಟ್ರ್ಯಾಕ್ಟರುಗಳನ್ನು ಉಪಯೋಗಕ್ಕೆ ತೆಗೆದುಕೊಂಡು ಹೋಗಿರುವವರನೇಕರು ಬಾಡಿಗೆ ಕೊಟ್ಟಿಲ್ಲ. ಈ ವಿಷಯವನ್ನು ಆಡಿಟ್ ರಿಪೋರ್ಟಿನಲ್ಲಿಯೂ ತಿಳಿಸಿದ್ದಾರೆ. ಇದಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಸರ್ಕಾರಕ್ಕೆ ನಷ್ಟವಾಗುತ್ತದೆ. ಈ ಸಂಬಂಧದಲ್ಲಿ ಕೆಲವು ರೈತರ ವಿಷಯದಲ್ಲಿ ತಾತ್ಸಾರ ಮನೋಭಾವವಿದೆ. ಇದು ಹೋಗಬೇಕು. ರೈತರು ಬೆಳೆಯಬೇಕಾದರೆ ಉಪಯುಕ್ತವಾದ ಕಬ್ಬಿಣದ ಸಾಮಾನುಗಳು ಆವಶ್ಯಕ. ಇವುಗಳನ್ನು ಮಲ್ಟಿ-ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಅಥವಾ ವ್ಯವಸಾಯದ ಇಲಾಖೆಯ ಮೂಲಕ ಸರಿಯಾಗಿ ಸರಬರಾಯಿ ಮಾಡಬೇಕು. ಗುದ್ದಲಿ, ಪಿಕಾಸಿಯ ಬೆಲೆ ಮಾರ್ಕೆಟ್ಟಿನಲ್ಲಿ ಹೆಚ್ಚುತ್ತಿದೆ. ಆದಕಾರಣ ಈ ಸಂಸ್ಥೆಗಳ ಮೂಲಕ ಖಾಸಗೀ ಜನ

(ಶ್ರೀ ಯು. ಎಂ. ಮಾದಪ್ಪ)

ರಿಗೆ ಮಾರುವಂತೆ ಮಾಡಿದರೆ ರೈತರು ಬೆಳೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ವ್ಯವಸಾಯದ ಇಲಾಖೆಗೆ ಸುಮಾರು 56 ಲಕ್ಷ ರೂಪಾಯಿಗಳನ್ನು ಪ್ರತಿವರ್ಷವೂ ಒದಗಿಸುತ್ತಿದ್ದೇವೆ. ಅರ್ಧ ಕೋಟಿಗೆ ಮೇಲ್ಪಟ್ಟು ಕೊಟ್ಟರೂ ದೇಶಕ್ಕೆ ಇದರಿಂದ ನಿರೀಕ್ಷೆ ಮಾಡಿದಷ್ಟು ಫಲ ದೊರೆಯುತ್ತಿಲ್ಲವೆಂದು ನನ್ನ ಅಭಿಪ್ರಾಯ. ಈ ಸಭೆಯ ಅಭಿಪ್ರಾಯವೂ ಹೀಗೆಯೇ ಇದೆಯೆಂದು ನನ್ನ ಭಾವನೆ. ಈ 56 ಲಕ್ಷ ರೂಪಾಯಿಗಳನ್ನು ಸುಮ್ಮನೆ ರೈತರಿಗೆ ಹಂಚಿದ್ದರೆ ವ್ಯವಸಾಯಗಾರ ಮುಂದೆ ಬರುತ್ತಿದ್ದನೇನೋ ಎಂಬ ಅಭಿಪ್ರಾಯವಿದೆ. ಪ್ರತಿ ಅಧಿವೇಶನದಲ್ಲಿಯೂ ಈ ವಿಷಯದಲ್ಲಿ ತೀವ್ರವಾದ ಟೀಕೆಯಾಗುತ್ತಲೇ ಇದೆ. ಈ ಮಾನ್ಯ ಸಭೆಯಲ್ಲಿ ಏನು ಅಭಿಪ್ರಾಯ ವ್ಯಕ್ತವಾಗುತ್ತದೆಯೋ ಅದಕ್ಕೆ ಸರಿಯಾದ ಗಮನ ದೊರಕುತ್ತಿಲ್ಲವೆಂದು ಹೇಳಬೇಕಾಗಿದೆ. ಮೂರು ವರ್ಷದ ಹಿಂದೆ ಈ ಸಭೆಯಲ್ಲಿ ಸಂಶೋಧನಾ ಸಂಸ್ಥೆಗಳ ವಿಚಾರ ಬಂತು. ಯಾವ ಯಾವ ಭಾಗದಲ್ಲಿ ಯಾವಯಾವ ಬೆಳೆಗೆ ಹೆಚ್ಚು ಆಗುತ್ತಿದೆಯೋ ಅಲ್ಲಿಗೆ ಸಂಶೋಧನಾಲಯಗಳನ್ನು ವರ್ಗಮಾಡಬೇಕು; ಭೂಗುಣ, ನೀರು, ಹವಾಗುಣ ಇವಕ್ಕೆ ತಕ್ಕ ಹಾಗೆ ಪೈರು ಬೆಳೆಯುವ ಸಂಶೋಧನಾ ಕೇಂದ್ರಗಳನ್ನು ಮಾಡಿಸಿ ಸಂಶೋದನೆ ನಡೆದರೆ ಹೆಚ್ಚು ಫಲಕಾರಿಯಾಗುತ್ತದೆ ಎಂಬ ಅಭಿಪ್ರಾಯವನ್ನು ಸದಸ್ಯರು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ, M. A. V ಹತ್ತಿಯ ಬಿತ್ತನೆ ಅರಸೀಕೆರೆ ಬೇಲೂರು ಮುಂತಾದ ಕಡೆ ಹೆಚ್ಚು ಬೆಳೆಯಾಗುತ್ತದೆ. ಅಲ್ಲಿಗೆ ಒಂದು ಸಂಶೋಧನಾಲಯವನ್ನು ವರ್ಗಾಯಿಸಿ ಎಂಬ ಸಲಹೆಯನ್ನು ನೀಡಿದ್ದೆವು. ಮಾನ್ಯ ಸಿದ್ಧವೀರಪ್ಪನವರ ವಶದಲ್ಲಿ ವ್ಯವಸಾಯ ಖಾತೆ ಇದ್ದಾಗ ಇದು ಖಂಡಿತವಾಗಿ ಉತ್ತಮವಾದ ಸಲಹೆ, ಅದನ್ನು ಕಾರ್ಯಗತ ಮಾಡುತ್ತೇವೆಂದು ಹೇಳಿದರು. ಆದರೆ ಈ ವಿಷಯದಲ್ಲಿ ಒಂದು ಹೆಜ್ಜೆ ಕೂಡ ಮುಂದೆ ಹೋಗಿಲ್ಲ. ಹತ್ತಿ ಬೀಜವನ್ನು ಸುಧಾರಿಸುವ ವಿಷಯದಲ್ಲಿ ಸರ್ಕಾರ ಹೆಚ್ಚು ಗಮನಕೊಟ್ಟಿಲ್ಲ, ಉದಾಸೀನರಾಗಿದ್ದಾರೆ. ಹತ್ತು ಸಾವಿರ ಬೇಲು ಅರಳೆ ಬೆಳೆಯುವ ಹತ್ತಿ ಪ್ರದೇಶದಲ್ಲಿ ಕೇವಲ ನಾಲ್ಕು ಸಾವಿರ ಬೇಲಿನಷ್ಟು ಬೆಳೆ ಬರುತ್ತಿದೆ. ಎರಡು ಲಕ್ಷ ಮಣ ಹತ್ತಿ ಕಡಮೆಯಾಗಿದೆ. ಎಂ. ಎ. V ಹತ್ತಿಯ ಬೀಜ ಬಿತ್ತನೆಗೆ ಯೋಗ್ಯವಿರಲು ಎಷ್ಟು ವರ್ಷಗಳ ಕಾಲಬೇಕು? ಎಷ್ಟು ವರ್ಷ ಕಾಲ ಈ ಬೀಜಗಳನ್ನು ಉಪಯೋಗಿಸಬೇಕು ಎಂದು ಕೇಳಿದರೆ, ಐದು ವರ್ಷ ಕಾಲ ಮಾತ್ರ ಬೀಜ ಉಪಯೋಗಿಸಲು ಯೋಗ್ಯವಿರುತ್ತದೆ ಎಂದು ಉತ್ತರ ಹೇಳುತ್ತಾರೆ. ಇದೇ ಸಭೆಯಲ್ಲಿದ್ದಾರೆ. 1944-45 ರಲ್ಲಿ ಇದನ್ನು introduce ಮಾಡಿದೆಯೆಂದು ಹೇಳಿದ್ದಾರೆ. ಹಾಗಾದಮೇಲೆ ಈಗ ಸದ್ಯ ಚಾಲ್ತಿಯಲ್ಲಿರುವ ಬೀಜ ಬಿತ್ತನೆಗೆ ಯೋಗ್ಯವಿಲ್ಲ ಎಂದು ಸರ್ಕಾರ ಹೇಳಿದಂತಾಯಿತು. ಇದರಿಂದ ಸರಿಯಾದ ಪ್ರತಿಫಲ ದೊರೆಯದಿದ್ದ ಮೇಲೆ ಇದನ್ನೇಕೆ ತೆಗೆದು ಹಾಕಲಿಲ್ಲ? ಇದರಿಂದ ರೈತರಿಗೆ ಎಷ್ಟು ನಷ್ಟ ಎಂಬುದನ್ನು ಸರ್ಕಾರ ಯೋಚನೆಮಾಡಬೇಕು. ಈ ನಷ್ಟಕ್ಕೆ ಸಂಬಂಧಪಟ್ಟ ಅಧಿಕಾರಿಗಳೇ ಕಾರಣ, ಈ ಸಭೆಯಲ್ಲಿ ಎಷ್ಟು ತೀವ್ರವಾದ ಟೀಕೆ ಬಂದರೂ ಸರ್ಕಾರದವರು ಗಮನಕೊಡಲಿಲ್ಲ. ಬೆಳೆಯುವ ವಿಸ್ತೀರ್ಣ ನೋಡಿದರೆ ಜಾಸ್ತಿಯಾಗಿದೆ, ಆದರೆ ಬೆಳೆ ಮಾತ್ರ ವರ್ಷವರ್ಷವೂ ಕಡಮೆಯಾಗುತ್ತಿದೆ. ಲಕ್ಷ್ಮಿ ಹತ್ತಿ 12 ರೂಪಾಯಿ ಇದೆ. ಎಂ. ಎಂ. V ಹತ್ತಿ 10 ರೂಪಾಯಿ 12 ಅಣೆಯಿಂದ 11 ರೂಪಾಯಿ ನಾಲ್ಕು ಆಣೆವರೆಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಲಕ್ಷ್ಮಿ ಹತ್ತಿ ಆರು ರೂಪಾಯಿ ಎಂಟಾಣೆ ಇದೆ. ಅರಸೀಕೆರೆಯಲ್ಲಿ ಹೆಚ್ಚಾಗಿರಬಹುದು.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕಾ ಶಾಖೆಗಳ ಮಂತ್ರಿಗಳು).—ಲಕ್ಷ್ಮಿಯ ಬೆಲೆಯು ಬಿದ್ದು ಹೋಗಿದೆ! (ನಗು!)

ಶ್ರೀ ಕೆ. ಪಂಚಾಕ್ಷರಯ್ಯ.—ಈ ವಿಷಯದಲ್ಲಿ ನಾವು ಸರ್ಕಾರವನ್ನು ಪದೇಪದೇ ಒತ್ತಾಯಮಾಡುತ್ತಿದ್ದೇವೆ. ಸಚಿವರು ಈಗಲಾದರೂ ಸಂಶೋಧನಾ ಕೇಂದ್ರವನ್ನು ಅರಸೀಕೆರೆಗೆ ವರ್ಗಮಾಡಬೇಕು. ಅಲ್ಲದೆ ಬೀಜವನ್ನು ಬದಲಾಯಿಸಿ, ಒಳ್ಳೆಯ ಬೀಜನವನ್ನು ನಮ್ಮ ಕ್ಷೇತ್ರಕ್ಕೆ ಒದಗಿಸಬೇಕು.

ವ್ಯವಸಾಯದ ವಿಚಾರದಲ್ಲಿ ಇನ್ನೊಂದು ಸಲಹೆ ಕೊಡಬೇಕಾಗಿದೆ. ಹೊಸದಾಗಿ ವಿದ್ಯಾ ಸುಧಾರಣೆಯನ್ನು ಜಾರಿಗೆತಂದಿದ್ದಾರೆ. ಪ್ರತಿ ಮಿಡ್ಲ್ ಸ್ಕೂಲಿಗೂ ವ್ಯವಸಾಯದಲ್ಲಿ ಶಿಕ್ಷಣ ಪಡೆದು ಪಳಗಿರುವ ಇನ್ಸ್ಪೆಕ್ಟರನ್ನು ಪಾಠ ಹೇಳುವುದಕ್ಕೆ ಒದಗಿಸಿದರೆ ಅನುಕೂಲವಾಗುತ್ತದೆ. ಇದಕ್ಕೆ ತಕ್ಕ ಸೌಲಭ್ಯಗಳನ್ನು ನೀಡಿದರೆ ವ್ಯವಸಾಯಗಾರರಿಗೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಒಂದು ಸಂಪ್ರದಾಯವನ್ನಿಟ್ಟು, ಖೋತಾ ಸೂಚನೆಯನ್ನು ಕಳುಹಿಸಿರುವವರಿಗೆ, ಅವಕಾಶ ಕೊಡಬೇಕು.

11-30 A.M.

*ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ಈ ವ್ಯವಸಾಯದ ಇಲಾಖೆಗೆ 1941 ನೇ ಇಸವಿಯಲ್ಲಿ ಎಷ್ಟು ನಾವು ಖರ್ಚುಮಾಡುತ್ತಿದ್ದೇವೋ ಅದಕ್ಕಿಂತ ಯಥೇಚ್ಛವಾಗಿ ಹಣವನ್ನು ಈಗ ಖರ್ಚುಮಾಡುತ್ತಿದ್ದೇವೆ. ಮಾನ್ಯ ಸಚಿವರು 1941 ನೇ ಇಸವಿಯಲ್ಲಿ 66 ಎಕರೆಗಳಲ್ಲಿ ಉತ್ಪನ್ನವನ್ನು ಮಾಡಿದ್ದರೂ ಇವೊತ್ತು 15 ವರ್ಷ ಕಳೆದಮೇಲೆ ನಿಮ್ಮ ಲೆಖ್ಖಾಚಾರದ ಪ್ರಕಾರ 66 ಲಕ್ಷ ಎಕರೆಗಳಲ್ಲಿ ಫಸಲು ತೆಗೆಯುತ್ತಿದ್ದಾರೆ ಎಂದು ಹೇಳಿದರು. ಹಾಗಾದರೆ ನಿಮ್ಮ ಲೆಖ್ಖ ಸುಳ್ಳು ಇರಬೇಕು. ನಾವು ಕೋಟಿಗಟ್ಟಲೆ ದುಡ್ಡು ಖರ್ಚುಮಾಡಿ ಲಕ್ಷಾಂತರ ಎಕರೆ ಜಮೀನನ್ನು ಜನಗಳಿಗೆ ವ್ಯವಸಾಯಕ್ಕೋಸ್ಕರ ಕೊಟ್ಟು ಇನ್ನೂ ಕೂಡ 66 ಲಕ್ಷ ಎಕರೆಗಳಲ್ಲಿ ನಾವು ಫಸಲನ್ನು ತೆಗೆಯುತ್ತಿದ್ದೇವೆ ಎಂದರೆ ಎಲ್ಲೋ ಲೋಪವಿರಬೇಕು.

Sri H. SIDDAVEERAPPA.—There is more intensive cultivation.

Sri H. M. CHANNABASAPPA.—Then shall I take it that your figures, *viz.*, that so many lakhs of acres of land were brought under cultivation under Grow More Food Campaign are false? Something is wrong somewhere. Where it is wrong, it is for the Government to find out and let this House know about it.

58 ಲಕ್ಷ ಖರ್ಚುಮಾಡಿದ್ದರಲ್ಲಿ 26 ಲಕ್ಷ ಸಂಬಳಕ್ಕೆ ಹೋಗುತ್ತದೆ. ಇದೇ ರೀತಿ ಎಷ್ಟುಕಾಲದವರೆಗೆ ಹೀಗೆ ಬೆಳೆಸಿಕೊಂಡು ಹೋಗಬಹುದೆಂಬುದು ಪರಿಶೀಲನೆಗೆ ಅರ್ಹವಾದ ವಿಷಯ. ಈಗ ಇಂಡಿಯಾದಲ್ಲಿರತಕ್ಕಂಥ

ರೈತರು ಬಹಳ ಮಂದಗಾಮಿಗಳು ಎಂಬ ಒಂದು ಪ್ರತೀತಿ ಇದೆ. ಇಂಡಿಯಾ ದೇಶದಲ್ಲಿರತಕ್ಕಂತ ರೈತರು ಬುದ್ಧಿವಂತರು. ಅವರು ಖಚಿತವಾಗಿ ಒಂದು ಕೆಲಸದಲ್ಲಿ ಆದಾಯ ಬರುತ್ತದೆ ಎನ್ನುವುದನ್ನು ಚೆನ್ನಾಗಿ ಮನಗಂಡ ಹೊರತು ಆ ಕೆಲಸಕ್ಕೆ ಕೈಹಾಕುವುದಿಲ್ಲ. ಅವರು ಮಂದಗಾಮಿಗಳಲ್ಲ. ಅವರು ಬುದ್ಧಿವಂತರು. ಮತ್ತು conservatives. ಈಗ 58 ಲಕ್ಷ ರೂಪಾಯಿ ಖರ್ಚು ಮಾಡತಕ್ಕಂಥ ಉದ್ದೇಶ ಭೂಮಿಯಲ್ಲಿ ಫಸಲು ಮಾಡುವುದು ಆಶಾದಾಯಕವಾಗಿರಬೇಕು ಮತ್ತು ಆದಾಯಕರವಾಗಿರಬೇಕು ಎಂಬುದು. ಒಂದು ಕಡೆ ಭೂಮಿಯನ್ನು ಯಥೇಚ್ಛವಾಗಿ ವಿಲೇವಾಡಿ ಉತ್ಪನ್ನ ಹೆಚ್ಚಿಗೆ ಮಾಡುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ನಾವು ಮತ್ತು Central Government ಕೊಡುತ್ತಿದ್ದೇವೆ. ಇನ್ನೊಂದು ಕಡೆ ಧಾರಣೆವಾಸಿಗಳು ಇಳಿಯುತ್ತಾ ಇದ್ದರೆ ಸುಮ್ಮನೆ watch ಮಾಡಿ ನೋಡುತ್ತಿದ್ದೇವೆ. ಧಾರಣೆವಾಸಿಗಳು ಇಳಿದು ಹೋಗಿ ರೈತನು ಹಾಕತಕ್ಕಂಥ ಬಂಡವಾಳಕ್ಕೆ ಮತ್ತು ಕೂಲಿಗೆ ಸರಿಸಮನಾಗಿ ಉತ್ಪನ್ನ ಅವನಿಗೆ ಬಾರದೆ ಹೋದರೆ ನೀವು ಖರ್ಚುಮಾಡತಕ್ಕಂಥ 58 ಲಕ್ಷ ರೂಪಾಯಿಗಳೇ ಅಲ್ಲ 580 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೂ, ಹೊಳೆಯಲ್ಲಿ ಹುಣಸೆಹಣ್ಣು ಕದಡಿದ ಹಾಗೆ ಏನೂ ಪ್ರಯೋಜನವಾಗುವುದಿಲ್ಲ. ತಾವು ಖರ್ಚುಮಾಡಿದ ಹಣದಿಂದ ರೈತನಿಗೆ ಅನುಕೂಲವಾಗಬೇಕಾದರೆ ಆತನು ಉತ್ಪನ್ನ ಮಾಡತಕ್ಕಂಥ ದವಸಗಳಿಗೆ ಆಶಾದಾಯಕವಾದ ಬೆಲೆಗಳು ಇರಬೇಕು, ಆಗ ಅವನು ಹೆಚ್ಚು ಹೆಚ್ಚಿಗೆ ಸರ್ಕಾರದವರು ಕೊಡತಕ್ಕಂಥ ಸೌಲಭ್ಯಗಳನ್ನು ತೆಗೆದುಕೊಂಡು ಹೆಚ್ಚು ಹೆಚ್ಚಾಗಿ ವ್ಯವಸಾಯದಲ್ಲಿ ಆಸಕ್ತನಾಗಿ ಹೆಚ್ಚು ಪ್ರಮಾಣದಲ್ಲಿ ದವಸವನ್ನು ಬೆಳೆದು ದೇಶಕ್ಕೆ ಕಲ್ಯಾಣವನ್ನು ಉಂಟುಮಾಡುತ್ತಾನೆ. ಅದು ಬಿಟ್ಟು ಆತನು ಹಾಕತಕ್ಕ ಬಂಡವಾಳಕ್ಕೆ ತಕ್ಕಂಥ ಉತ್ಪತ್ತಿ ಬರುತ್ತದೆ ಎನ್ನುವುದನ್ನು ನಿರ್ದಿಷ್ಟವಾಗಿ ಮಾಡಿ ಅದಕ್ಕೆ ತಕ್ಕ ರಕ್ಷಣೆಯನ್ನು ಕೊಡದೆಹೋದ ಪಕ್ಷದಲ್ಲಿ ವಾಸ್ತವವಾಗಿ ನೀವು ನಿಮ್ಮ ಇಲಾಖೆಯನ್ನು ಮುಚ್ಚಬೇಕಾಗುತ್ತದೆ. ಇವೊತ್ತಿನ ದಿನವೇ ಪೇಪರ್‌ನಲ್ಲಿ ಓದಿದೆ. ಪಂಜಾಬಿನಲ್ಲಿ Finance Minister Assemblyಯಲ್ಲಿ ಎಲ್ಲಕ್ಕಿಂತಲೂ ಬಹಳ ಪ್ರಾಮುಖ್ಯವಾದ ವಿಚಾರವನ್ನು ಹೇಳಿದ್ದಾರೆ. ರೈತನಿಗೆ ಲಾಭದಾಯಕವಾದಂಥ ದರಗಳನ್ನು ಆತನು ಉತ್ಪನ್ನಮಾಡತಕ್ಕಂಥ ಪದಾರ್ಥಗಳಿಗೆ ಕೊಟ್ಟೇತೀರಬೇಕು. ಅದಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಇಂಡಿಯಾ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆಂದು ಕೇಳಿದ್ದೇನೆ. ಇಲ್ಲಿ ನಿಮಗೆ ಬಂದಿರತಕ್ಕಂಥ ಉತ್ತರ, ನಾವು ನೋಡಿದ್ದಲ್ಲಿ,'ಯೋಚನೆಮಾಡುತ್ತೇವೆ, ಕಾದುನೋಡುತ್ತೇವೆ' ಎಂದು ಹೇಳುತ್ತಿದ್ದಾರೆ. ಆದರೆ ಈ ಧಾರಣೆಗಳು ಒಂದು ಮಟ್ಟಕ್ಕಿಂತ ಕೆಳಗೆ ಹೋದಮೇಲೆ ಏನೂಮಾಡುವುದಕ್ಕಾಗುವುದಿಲ್ಲ. ಈ ವಿಷಯಕ್ಕೆ ತೀವ್ರವಾದ ಗಮನವನ್ನು ಸರ್ಕಾರದವರು ಕೊಟ್ಟು ರೈತನು ಉತ್ಪನ್ನಮಾಡತಕ್ಕಂಥ ದವಸಧಾನ್ಯಗಳಿಗೆ ಸೂಕ್ತವಾದ ಬೆಲೆ ದೊರಕಿಸಲು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈ 15 ವರ್ಷಗಳಲ್ಲಿ ವ್ಯವಸಾಯದ ಇಲಾಖೆ ಯಾವ ರೀತಿ ಕೆಲಸಮಾಡಿಕೊಂಡು ಬಂದಿದೆ, ಮಾಡಿದ ಕೆಲಸ ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾಗಿ ಪರಿಣಮಿಸಿದೆ. ಮುಂದೆ ನಮ್ಮ Policy ಯಾವ ರೀತಿ ಇರಬೇಕೆಂಬುದನ್ನು ವಿಚಾರಣೆಮಾಡತಕ್ಕಂಥ ಕಾಲ ಬಂದಿದೆ ನಾವು ಸುಮ್ಮನೆ ಕಣ್ಣುಮುಚ್ಚಿಕೊಂಡು Grow More Food Campaign ಬಗ್ಗೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುತ್ತಿದ್ದೇವೆ. ಅದು ಯಾವ ರೀತಿ ಪೋಲಾಗುತ್ತಿದೆ ಎಂಬುದನ್ನು ಸಭೆಯ ಮುಂದೆ ಅನೇಕವೇಳೆ Grow More Food Campaign ವಿಚಾರವಾಗಿ ಮಾತನಾಡುತ್ತಾ ಹೇಳಿದ್ದೇನೆ.

Sri H. SIDDAVEERAPPA.—If you permit me, I want to intervene only for a minute. If the Hon'ble Members had looked into all the reports of the Grow More Food Campaign they could have seen that 90 per cent of our expenditure was confined only to those works which gave irrigation facilities to our people. Please don't forget that.

Sri H. M. CHANNABASAPPA.—I do not want to enter into a matter which leads to controversy. I have no time. If the Hon'ble Minister wants more details, if time is given, I should be able to stand a full-dressed debate on that subject.

Mr. DEPUTY SPEAKER.—Not now.

Sri H. M. CHANNABASAPPA.—If the Chair has no objection, I am ready for a debate. Mechanised agricultural ನಮ್ಮ ದೇಶದಲ್ಲಿ ಆಗಬೇಕು ಎಂಬ ಕೂಗು ಹೊರಟಿತು. ಸರ್ಕಾರದವರು ಲಕ್ಷಾಂತರ ರೂಪಾಯಿ ಖರ್ಚುಮಾಡಿ, ಆ ಒಂದು ಕೂಗಿನ ಪರಿಣಾಮವಾಗಿ ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರ್ಸ್ ತೆಗೆದುಕೊಂಡರು. ರೈತರು ಯಥೇಚ್ಛವಾಗಿ ಉತ್ಪನ್ನ ಮಾಡಬೇಕೆಂಬ ಉದ್ದೇಶದಿಂದ ಟ್ರಾಕ್ಟರ್‌ಗಳನ್ನು ತೆಗೆದುಕೊಂಡು ಹೊಲ ಉಳಿಸುವುದಕ್ಕೆ ಪ್ರಾರಂಭಮಾಡಿದರು. ಇದಾಗಿ 3-4 ವರ್ಷಗಳಾದುವು. ಈ ನಾಲ್ಕು ವರ್ಷಗಳಲ್ಲಿಯೂ mechanised agricultureಗೆ ಹಾಕಿರತಕ್ಕಂಥ ದುಡ್ಡು ಯಾವ ರೀತಿ ಖರ್ಚಾಗಿದೆ, ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾಗಿದೆ ಎನ್ನತಕ್ಕಂಥಾದ್ದನ್ನು ಇವೊತ್ತಿನವರೆಗೆ ಸರ್ಕಾರದವರು ಪರಿಶೀಲಿಸಿದ್ದಾರೆಯೋ ಎಂದು ಸರ್ಕಾರದವರನ್ನು ಪ್ರಶ್ನಿಸುತ್ತೇನೆ. ಈಗಾಗಲೇ ಸುಮಾರು ಒಂಭತ್ತು ಲಕ್ಷ ರೂಪಾಯಿಗಳನ್ನು tractors organisationಗೆ ಮತ್ತು bulldozers organisationಗೆ provide ಮಾಡಿದ್ದಾರೆ. ಒಂದು ಕಡೆ ನಾವು ಭೂಮಿಯ ceiling limitನ್ನು ಕಡಮೆಮಾಡಬೇಕು ಎಂದು ಇದ್ದೇವೆ, ಅಂದರೆ, ಒಬ್ಬರ ಹತ್ತಿರ ಭೂಮಿ ಇಷ್ಟೇ ಪ್ರಮಾಣದಲ್ಲಿ ಇರಬೇಕು ಎನ್ನುವುದನ್ನು ನಿಗದಿಮಾಡುವ ಪ್ರಮೇಯದಲ್ಲಿ ಇದ್ದೇವೆ. ಇನ್ನೊಂದು ಕಡೆ ಟ್ರಾಕ್ಟರುಗಳನ್ನು ಯಥೇಚ್ಛವಾಗಿ ತೆಗೆದುಕೊಂಡು ಉಳಿ ಎಂದು ಜನಗಳಿಗೆ ಪ್ರೋತ್ಸಾಹ ಕೊಡುತ್ತಿದ್ದೇವೆ. ಒಂದು ಕಡೆ ಭೂಮಿ ಪ್ರಮಾಣವನ್ನು ಕಡಿಮೆಮಾಡಬೇಕೆಂದು ಇದ್ದರೆ, ಇನ್ನೊಂದು ಕಡೆ ಚೆನ್ನಾಗಿ ಭೂಮಿಯನ್ನು ಉತ್ತು ಬೇಸಾಯ ಮಾಡಿ ಅಧಿಕವಾಗಿ ಉತ್ಪನ್ನಮಾಡಬೇಕೆಂದು ಹೇಳುತ್ತಿದ್ದೇವೆ. ಬೆಳೆದ ಪದಾರ್ಥಗಳಿಗೆ ತಕ್ಕ ಬೆಲೆಯನ್ನು ಕೊಡುವುದಕ್ಕೆ ನಾವು ಹಿಂದೆ ಮುಂದೆ ನೋಡುತ್ತಿದ್ದೇವೆ. ನಿಮ್ಮ ನೀತಿ ಯಾವುದು ಎನ್ನತಕ್ಕಂಥಾದ್ದು

(SRI. H. M. CHANNABASAPPA.)

ಸರಿಯಾಗಿ ಅರ್ಥವಾಗುತ್ತಾ ಇಲ್ಲ. ಭೂ ಸುಧಾರಣಾ ಪದ್ಧತಿಯಲ್ಲಿ ಭೂಮಿಯಲ್ಲಿರತಕ್ಕಂಥ ಸಾಧನ ಮತ್ತು ಉತ್ಪನ್ನ ಶಕ್ತಿಯನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಪ್ರಾಮುಖ್ಯವಾಗಿಟ್ಟುಕೊಳ್ಳಬೇಕು ಎಂಬುದಾಗಿ National Planning Committeeಯವರು ಹೇಳಿದ್ದಾರೆ. ಅಧಿಕವಾಗಿ ಉತ್ಪನ್ನಮಾಡಬೇಕಾದರೆ, ಈಗ ಹೋಗುತ್ತಾ ಇರತಕ್ಕಂಥ ಮಾರ್ಗ ಸರಿಯೇ ಅಥವಾ ತಪ್ಪೇ ಎಂಬುದನ್ನು ಪರಿಶೀಲನೆಮಾಡತಕ್ಕಂಥಾದ್ದು ಬಹಳ ಅವಶ್ಯಕ. ಹಾಗಿಲ್ಲದೆ ಒಂದು ಕಡೆ ಭೂಸುಧಾರಣೆ ಪದ್ಧತಿಯನ್ನು ನನಗೆ ಮನಸ್ಸಿಗೆ ತೋಚಿದಂತೆ ಮಾಡಿಕೊಂಡು ಹೋಗುತ್ತಾ ಇರುವುದು, ಇನ್ನೊಂದು ಕಡೆ Grow More Food Campaignಅನ್ನು ಮನಸ್ಸಿಗೆ ತೋರಿದಂತೆ ಮಾಡಿಕೊಂಡು ಹೋಗುತ್ತಾ ಇರುವುದು, Tractor Organisation ಯಾವ ರೀತಿ organise ಮಾಡಬೇಕು ಎಂಬುದು ಗೊತ್ತಿಲ್ಲದೆ ಹಳೇ ಪದ್ಧತಿಯಂತೆ ನಡೆದುಕೊಂಡು ಹೋಗುವುದು ಒಂದಕ್ಕೊಂದಕ್ಕೆ ವಿರೋಧಾಭಾಸವಾಗಿದೆ. ಆದುದರಿಂದ ನಾನು ಈ ದಿವಸ ವ್ಯವಸಾಯ ಇಲಾಖೆ ಕಾರ್ಯಕ್ರಮ, ಈ ಭೂಸುಧಾರಣೆ ಕಾರ್ಯಕ್ರಮ ಮತ್ತು ಆಹಾರ ಉತ್ಪನ್ನವನ್ನು ಯಥೇಚ್ಛವಾಗಿ ಮಾಡತಕ್ಕಂಥ ಕಾರ್ಯಕ್ರಮ, ಇತ್ಯಾದಿ, ಇತ್ಯಾದಿ, 15 ವರ್ಷಗಳಿಂದ ಎಷ್ಟರಮಟ್ಟಿಗೆ ಪ್ರಗತಿಯನ್ನು ಸ್ಥಾಪಿಸಿವೆ, ಇನ್ನು ಮುಂದೆ ನಾವು ಕಾರ್ಯಕ್ರಮಗಳನ್ನು ಯಾವ ರೀತಿ ರೂಪುಗೊಳಿಸಬೇಕು ಎನ್ನತಕ್ಕಂಥ ಅಂಶವನ್ನು ಪರಿಶೀಲನೆಮಾಡಿ, ಸರ್ಕಾರಕ್ಕೆ ಸರಿಯಾದ ಒಂದು ವರದಿಯನ್ನು ಒಪ್ಪಿಸುವುದಕ್ಕೆ ಒಂದು ಸಮಿತಿಯನ್ನು ತಕ್ಷಣ ಏರ್ಪಾಡುಮಾಡಬೇಕು ಎಂದು ಸರ್ಕಾರಕ್ಕೆ ಸಲಹೆಮಾಡುತ್ತೇನೆ. ಈ ಸಮಿತಿಯನ್ನು ತಾವು ಏರ್ಪಾಡುಮಾಡಿ ಅವರು ಸರಿಯಾದ ಸಲಹೆಯನ್ನು ಸರ್ಕಾರಕ್ಕೆ ಕೊಟ್ಟು ವ್ಯವಸಾಯದ ನೀತಿ, ಈ ಭೂ ಪದ್ಧತಿಯ ನೀತಿ ಇವೆಲ್ಲವೂ ಕೂಡ ಹೊಂದಿಕೊಂಡು ಹೋಗುವಂತೆ ವ್ಯವಸ್ಥೆಮಾಡದೆ ಹೋದಪಕ್ಷದಲ್ಲಿ ಆ ಬಾಬಿನಲ್ಲಿ ಖರ್ಚುಮಾಡಿದಂಥ ಹಣಕ್ಕೆ ತಕ್ಕ ಪ್ರತಿಫಲ ಜನಗಳಿಗೆ ಉಂಟಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ವ್ಯವಸಾಯದ ಇಲಾಖೆಗೆ ಖರ್ಚುಮಾಡತಕ್ಕ 58 ಲಕ್ಷ ರೂಪಾಯಿಗಳ ಪೈಕಿ ಒಂಭತ್ತು ಲಕ್ಷ ರೂಪಾಯಿಗಳು ಟ್ರಾಕ್ಟರುಗಳಿಗೆ ಹೀಗೆ ಖರ್ಚಾಗುತ್ತಿದೆ. ಹೆಬ್ಬಾಳಿಗೆ ಹೋಗಿ ಆ ದೃಶ್ಯ ನೋಡಿದರೆ ಹೊಟ್ಟೆ ಉರಿದುಹೋಗುತ್ತದೆ. ನಮ್ಮ ಹತ್ತಿರ 150 ಟ್ರಾಕ್ಟರುಗಳಿವೆ. ಒಂದೊಂದು ಟ್ರಾಕ್ಟರಿನಮೇಲೆ 15-20 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಹೀಗೆ ಒಟ್ಟು ಸುಮಾರು 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಟ್ರಾಕ್ಟರುಗಳನ್ನು ಕೊಂಡು ಕೊಂಡು ಕೇವಲ 4-5 ವರ್ಷಗಳಾದುವು. ಇನ್ನು bulldozersಗಳು 26 ಇವೆ. ಅವುಗಳಿಗೆ ಹೆಚ್ಚು ಕಡಿಮೆ 13 ಲಕ್ಷ ಖರ್ಚು ಆಗಿದೆ. ಹೀಗೆ ಲಕ್ಷಾಂತರ ರೂಪಾಯಿ ಹಾಕಿ 4-5 ವರ್ಷಗಳಾಗಿವೆ. ಆದರೆ ಈ 150 ಟ್ರಾಕ್ಟರುಗಳ ಸ್ಥಿತಿ ಏನಾಗಿದೆ ಎಂಬುದನ್ನು ತಾವು ಪರಿಶೀಲನೆ ಮಾಡಿದ್ದೀರಾ? ಮಾನ್ಯ ಮಂತ್ರಿಗಳಾದ ಶ್ರೀ ಎಚ್. ಸಿದ್ಧವೀರಪ್ಪನವರು Agricultural Minister ಆಗಿದ್ದರು. ಈಗ ಡಾ|| ಆರ್. ನಾಗನಗೌಡರು Agriculture Minister ಆಗಿದ್ದಾರೆ. ಹೆಬ್ಬಾಳ್‌ನಲ್ಲಿ ಲಕ್ಷಾಂತರ ರೂಪಾಯಿ ಖರ್ಚುಮಾಡಿಕೊಂಡು ಕೊಂಡ ಈ ಟ್ರಾಕ್ಟರುಗಳು ಬಿಸಿಲಿನಲ್ಲಿ ಒಣಗಿ ಮಳೆಯಲ್ಲಿ ನೆನೆದು ಕನಿಷ್ಠ ಸ್ಥಿತಿಯಲ್ಲಿವೆ. ಇವೊತ್ತಿನ ದಿವಸ ಅವಕ್ಕೆ ಬೆಲೆ ಕಟ್ಟಿದರೆ scrap value ಎಷ್ಟಾಗುತ್ತದೋ ಅವಕ್ಕೆ ಅಷ್ಟಾಗುತ್ತದೆ. ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರಿಂದ ರೈತನಿಗೂ ಪ್ರಯೋಜನವಾಗಲಿಲ್ಲ, ಸರ್ಕಾರಕ್ಕೂ ಪ್ರಯೋಜನವಾಗಲಿಲ್ಲ.

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲ್).—ಟ್ರ್ಯಾಕ್ಟರುಗಳನ್ನು ಮತ್ತು ಬುಲ್‌ಡೋಜರ್‌ಗಳನ್ನು ಕೊಂಡುಕೊಳ್ಳುವಾಗ ಅದಕ್ಕೆ ತಾವು ಓಟು ಮಾಡಿದಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೊತ್ತಿನ ದಿವಸ ಈ ಟ್ರ್ಯಾಕ್ಟರುಗಳನ್ನು ಸರಿಪಡಿಸುವುದಕ್ಕೆ ಒಂದು ಕೋಟಿ ರೂಪಾಯಿ ಬೇಕಾದರೂ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ಅದರಿಂದ ಸತ್ಪ್ರಯೋಜನವಾಗಬೇಕು. ಮೆಷಿನರಿ ಏನೇನು ಇದೆ, ಮೆಷಿನರಿ ಯಾವ ಯಾವ ಸ್ಥಿತಿಯಲ್ಲಿವೆ ಎಂಬುದನ್ನೂ ಕೂಡ ಕರಾರುವಾಕ್ಕಾಗಿ ಲೆಖ್ಖ ತೆಗೆದುಕೊಂಡು ಅವುಗಳನ್ನು ರಿಪೇರಿ ಮಾಡಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ, ಅವುಗಳನ್ನು ಮಾರಿಬಿಟ್ಟು scrap value ತೆಗೆದುಕೊಂಡು ಈ ರೀತಿ ಮಾಡಿದ ಹೊರತು ಏನೂ ಪ್ರಯೋಜನವಾಗುವುದಿಲ್ಲ. ಕೆಲವು ಟ್ರ್ಯಾಕ್ಟರುಗಳನ್ನು ರೈತರಿಗೆ ಕೊಟ್ಟಿದ್ದೀರಿ. ಹಾಗೆ ಮಾಡುವುದರಿಂದ ತಮ್ಮ ತಲೆಯಮೇಲೆ ಇದ್ದ ಭಾರವನ್ನು ಕಳೆದುಕೊಂಡು ರೈತರ ತಲೆಯಮೇಲೆ ಹಾಕಿದ ಹಾಗಾಯಿತು. ಸರ್ಕಾರದ ಹತ್ತಿರ ಈ ಟ್ರ್ಯಾಕ್ಟರುಗಳು ಮಳೆ ಬಿಸಿಲಿನಲ್ಲಿದ್ದು ಹಾಳಾಗುವುದಕ್ಕೆ ಬದಲು ರೈತರ ಮನೆಯಲ್ಲಿ ಕೆಲಸಮಾಡದೆ ನಿಂತುಬಿಟ್ಟು ಬಿಸಿಲು ಮಳೆಯಲ್ಲಿ ಹಾಳಾಗುತ್ತಿವೆ. ಇದರಿಂದ ರೈತರಿಗೂ ಪ್ರಯೋಜನವಾಗುತ್ತಾ ಇಲ್ಲ, ಸರ್ಕಾರಕ್ಕೂ ಪ್ರಯೋಜನವಾಗುತ್ತಾ ಇಲ್ಲ. ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಅಗತ್ಯವಾಗಿ ಒಂದು ಕಮಿಟಿಯನ್ನು ಏರ್ಪಾಡುಮಾಡಬೇಕು. 1953ನೇ ಇಸವಿಯಲ್ಲಿ mechanised agricultrue ಯಾವ ರೀತಿ ಆಗುತ್ತಿದೆ ಎಂಬುದನ್ನು ಪರಿಶೀಲನೆಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ಮಾಡಬೇಕು ಎಂದು ಸಲಹೆ ಮಾಡಿದ್ದರು. 1953ನೇ ಇಸವಿಯಲ್ಲಿ ಮಾಡಿರತಕ್ಕಂಥ ಸಲಹೆ ಈಗ ತಾನೇ ಪೂರ್ಣವಾಗಿ ಕಾರ್ಯಕ್ರಮಕ್ಕೆ ಬಂದಿದೆ. ಈಗ ಒಂದು Three-men Committee ಏರ್ಪಾಡು ಮಾಡಿದ್ದಾರೆ ಎಂದು ವರದಿ ಬಂದಿದೆ. ಈ ಕಮಿಟಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ಇವರೇ Grow More Food proposition, Mechanised Agriculture proposition, Price Level proposition ಇವೆಲ್ಲವನ್ನೂ ಕೂಡ ಸಮಗ್ರವಾಗಿ ಪರಿಶೀಲನೆಮಾಡಿ ಇವೊತ್ತು ವ್ಯವಸಾಯ ಇಲಾಖೆಯಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತಿದೆ, ಮುಂದೆ ಯಾವ ರೀತಿ ವ್ಯವಸಾಯ ಇಲಾಖೆ ಕೆಲಸ ಮಾಡಬೇಕು ಎನ್ನುವ ವಿಚಾರದಲ್ಲಿ ಸಲಹೆ ಮಾಡುವುದಕ್ಕೆ ಈ ಸರ್ಕಾರದಲ್ಲಿ ಒಂದು ಕಮಿಟಿಯನ್ನು ಏರ್ಪಾಡುಮಾಡಬೇಕೆಂದು ಸಲಹೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಅಧ್ಯಕ್ಷರೇ, ಸರ್ಕಾರದ ಖರಾಬು ಜಮೀನಿನಲ್ಲಿ ಕಾಫಿ ಬೆಳೆಯನ್ನು ಮಾಡಲು ವ್ಯವಸ್ಥೆಯಾಗುವಂತೆ ಏರ್ಪಾಡು ಮಾಡಬೇಕೆಂದು ಒತ್ತಿ ತಿಳಿಸುವುದಕ್ಕೆ ಈ ಖೋತಾ ನಿರ್ಣಯವನ್ನು ಇಲ್ಲಿ ಮಂಡಿಸುತ್ತಿದ್ದೇನೆ.

ಸ್ವಾಮಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಈಗಾಗಲೇ ಲಕ್ಷಾಂತರ ಎಕರೆ ಸಾಗುವಳಿ ಆಗುತ್ತಿದೆ; ಮತ್ತು

ಸಾಗುವಳಿ ಆಗದೆ ಬಂಜರೂ ಬೀಳುತ್ತಿದೆ. ಈಗ ಕಾಫಿ ಖರಾಬು ಮೊದಲಿನಿಂದಲೂ ಬಂಜರು ಇದೆ. ದೈವದತ್ತವಾಗಿ ಬಂದಿರತಕ್ಕಂಥ ಈ ಬಂಜರು ಜಮೀನನ್ನು ಯಾರೂ ಕೂಡ ಉಪಯೋಗಿಸಿಕೊಳ್ಳದೆ, ಸರ್ಕಾರದವರೂ ಕೂಡ ಉಪಯೋಗ ಹೊಂದದೆ ಇರತಕ್ಕಂಥ ವಿಚಾರವನ್ನು ನಾನು ಇಲ್ಲಿ ತಿಳಿಸುತ್ತೇನೆ. ಕಾಫಿ ಬೆಳೆಯನ್ನು ಪರದೇಶಕ್ಕೆ ರಫ್ತುಮಾಡುವುದರಿಂದ ನಮಗೆ ಹಣ ಹೊರಗಿನಿಂದ ಬರುತ್ತದೆ. ಕಾಫಿ ಜಮೀನನ್ನು ಸರ್ಕಾರದವರು ಅಮಾನಿಯಾಗಿ ಸಾಗುವಳಿ ಮಾಡಿದಪಕ್ಷದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಈಗಾಗಲೇ ಈ ಕಾಫಿ ಬೆಳೆಯು ಆಕರ್ಷಣೀಯವಾಗಿಲ್ಲದೆ ಸಾಗುವಳಿದಾರರಲ್ಲಿ ಬಂಡವಾಳವಿಲ್ಲದೆ ಫಸಲೂ ಕೂಡ ಬಹಳ ಕಡಮೆಯಾಗುತ್ತಿದೆ; ಮತ್ತು ಸಾಗುವಳಿ ಮಾಡತಕ್ಕಂಥ ಪ್ರದೇಶ ಕಡಮೆಯಾಗುತ್ತಿದೆ. ಈ ಕಾರಣಗಳಿಂದ ನಾನು ಹೇಳಿದ ಪ್ರಕಾರ ಮಾಡಿದರೆ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದಲ್ಲದೆ, ಸರ್ಕಾರದ ವರಮಾನವನ್ನೂ ಸಹ ಹೆಚ್ಚಿಸಿಕೊಳ್ಳಬಹುದು. ಈಗ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಸಾಗುವಳಿ ಮಾಡುವುದಕ್ಕೆ ಯಾವ ರೈತರೂ ತಯಾರಾಗಿಲ್ಲ. ಸರ್ಕಾರ ಒಂದು ಕಡೆ ನಿರುದ್ಯೋಗಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಸಿದ್ಧವಿದೆ. ಕೇಂದ್ರ ಸರ್ಕಾರದವರೂ ಕೂಡ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೂಡ ಖರ್ಚುಮಾಡುವುದಕ್ಕೂ ಮುಂದೆ ಬರುವವರಾಗಿದ್ದಾರೆಂದು ನಂಬಿದ್ದೇನೆ. ಹೀಗಿರುವಾಗ ಕೇಂದ್ರ ಸರ್ಕಾರದವರ ಸಹಾಯವನ್ನು ಕೂಡ ಪಡೆದು ನಮ್ಮಲ್ಲಿ ಪಾಳುಬಿದ್ದಿರುವ ಕಾಫಿ ಖರಾಬು ಎಷ್ಟು ಎಕರೆಗಳಿವೆ ಎಂಬುದನ್ನು ತಿಳಿದು ಅದನ್ನು ಸಾಗುವಳಿ ಮಾಡುವುದಕ್ಕೆ ಪ್ರಯತ್ನ ಮಾಡುವುದಲ್ಲದೆ, ಅದರಿಂದ ಲಾಭವಾಗುತ್ತದೆಯೋ ನಷ್ಟವಾಗುತ್ತದೆಯೋ ಎಂಬುದನ್ನು ತಿಳಿಯಲು ಒಂದು ಸಮಿತಿಯನ್ನು ನೇಮಿಸುತ್ತಾರೆಂದು ನಂಬಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. DEPUTY SPEAKER.—What time do you require Sri Nagangowda to reply to the debate because we have got to close this Demand at Twelve o'clock.

Dr. R. NAGAN GOWDA.—Very many items have been touched by the Hon'ble Members; atleast 15 minutes would be required to answer the important points.

